812

A 812

సృష్టి - షిల

ఎం. శ్రీనివాసరావ్

O,33,3SR2
5 812

Digitized by ROJA MUTHIAH RESEARCH LIBRARY

ಕನ್ನಡ ಸಾಹಿತ್ಯ ಪರಿಷತ್ತು,
ಸರಸ್ವತಿ ಭಂಡಾರ
ಬೆಂಗಳೂರು-೧೮.

Digitized by ROJA MUTHIAH RESEARCH LIBRARY

# ಸ್ವಪ್ನ-ಫಲ.

ಕರ್ಣಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 812 ವರ್ಗ ಸಂಖ್ಯೆ
ತಾರೀಖು
ಬೆಲೆ

ಎಂ. ಶ್ರೀನಿವಾಸರಾವ್

ಮುಂಬಯಿ

ಇವರಿಂದ ವಿರಚಿತವಾಗಿ ಪ್ರಕಟಿಸಲ್ಪಟ್ಟಿತು.

ಸರಸ್ವತಿ ಭಂಡಾರ
ಬೆಂಗಳೂರು

---

ಇದರ ವಿಶಿಷ್ಟ ಹಕ್ಕನ್ನು ಗ್ರಂಥಕರ್ತರು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ.

1923

ಬೆಲೆ: ೪ ಆಣೆ.

Digitized by ROJA MUTHIAH RESEARCH LIBRARY

0,33,3SRI S
N23

# ಉಪೋದ್ಘಾತ.

ನಮ್ಮ ಭಾರತ ವರ್ಷದಲ್ಲಿ ಅವತಾರವೆತ್ತಿ ಪ್ರತಿಷ್ಠಾಕಾಮರಾಗದೆ ಕೇವಲ ಲೋಕಾಭ್ಯುದಯಕ್ಕಾಗಿ ಮಹತ್ತಾದ ಸತ್ಕಾರ್ಯಗಳನ್ನೆಸಗಿ ಚತುರ್ದಿಕ್ಕುಗಳಲ್ಲಿಯೂ ಜನಜನಿತವಾಗುವ ಅಮೋಘಕೀರ್ತಿಯನಾರ್ಜಿಸಿದ ಪುಣ್ಯಶ್ಲೋಕರಲ್ಲಿ ಗೌತಮ ಮುನಿಯೂ ಒಬ್ಬನು. ಈತನನ್ನು ಸಿದ್ಧಾರ್ಥನೆಂದೂ ಬುದ್ಧನೆಂದೂ ಕೂಡ ಕರೆಯುವರು. ಬುದ್ಧ ಅಂದರೆ ಜ್ಞಾನಿ. ಈ ಹೆಸರನ್ನು ಆತನಿಗೆ ಆತನ ಶಿಷ್ಯರು ಕೊಟ್ಟರು. ಬುದ್ಧನು ಶುಮಾರು ಕ್ರಿ. ಪೂ. ೫೫೦ರಲ್ಲಿ ಅಂದರೆ ಎರಡು ಸಾವಿರದ ಐನೂರು ವರುಷಗಳ ಹಿಂದೆ ಹುಟ್ಟಿದನೆಂದು ಆಧುನಿಕ ಇತಿಹಾಸಕಾರರು ಗೊತ್ತು ಹಿಡಿಯುತ್ತಾರೆ. ಆದರೂ, ಇದರ ವಿಷಯ ಅನೇಕ ಭಿನ್ನಾಭಿಪ್ರಾಯಗಳಿವೆ. ಈ ಕುರಿತು ಚರ್ಚಿಸುವದು ನಮ್ಮ ಗ್ರಂಥದ ಉದ್ದೇಶವಲ್ಲ. ಬುದ್ಧನು ಶಾಕ್ಯವಂಶಕ್ಕೆ ಸೇರಿದವನು. ಶಾಕ್ಯರು ಕಪಿಲವಸ್ತು ಎಂಬ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು, ಬುದ್ಧನ ತಂದೆಯಾದ ಶುದ್ಧೋದನನು ಅವರ ಅಧಿಪತಿಯಾಗಿದ್ದನು. ಬುದ್ಧನು ಬಾಲ್ಯದಿಂದಲೂ ಸೌಖ್ಯಸಂಪತ್ತಿನಿಂದಲೇ ಹುಟ್ಟಿ ಬೆಳೆದವನಾದರೂ ಆತನ ಮನಸ್ಸಿಗೆ ಈ ಸಾಮ್ರಾಜ್ಯಾದಿ ಸಕಲೈಶ್ವರ್ಯಗಳಿಂದ ರವತ್ತಾದರೂ ಶಾಂತಿ ಸಿಗಲಿಲ್ಲ. ಒಮ್ಮೆ ತನ್ನ ನಗರದೊಳಗೆ ಸಂಚರಿಸುತ್ತಿರುವಾಗ ಭಿಕ್ಷೆಬೇಡುತ್ತಿದ್ದ ಕೆಲವು ಕುರುಡರನ್ನೂ ಅಂಗಹೀನರನ್ನೂ ಇನ್ನೊಂದು ವೇಳೆ ಒಬ್ಬ ಕುಷ್ಠರೋಗಿಯು ಗಾಯಗಳಿಂದ ಬೀದಿಯಲ್ಲಿ ಬಿದ್ದು ನರಳುತ್ತಿದ್ದುದನ್ನೂ ಕಂಡು ಅಂತರಂಗದಲ್ಲಿಯೇ ಪಶ್ಚಾತ್ತಾಪ ಪಟ್ಟನು. ಅದಲ್ಲದೆ ಒಂದು ದಿನ ಕೆಲವರು ಗೋಳಾಡುತ್ತಾ ಒಂದು ಶವವನ್ನು ಸ್ಮಶಾನಕ್ಕೆ ಒಯ್ದುಕೊಂಡು ಹೋಗುತ್ತಿದ್ದುದನ್ನು ನೋಡಿ ಆತನ ಹೃದಯಕ್ಕೆ ಇನ್ನಷ್ಟು ಸಂತಾಪವುಂಟಾಯಿತು. ಅಂದಿನಿಂದ ಇಹಪರಗಳ ವಿಷಯ ಬಹು ದೂರ ದೃಷ್ಟಿಯಿಂದ ಆಲೋಚಿಸ ಹತ್ತಿದನು. ಸರ್ವಸಮ್ಮತವಾಗಿ ಈ ಲೋಕವು ದುಃಖಮಯವಾದುದೆಂದು ತಿಳಿದಿದ್ದರೂ ಜನರು, ದೀಪಕ್ಕೆ ಬಿದ್ದು ಸಾಯುವ ಪತಂಗಗಳಂತೆ, ಮತ್ತೂ ಮತ್ತು ಇಂಥಾ ದುಃಖಕ್ಕೆ ಗುರಿಯಾಗಲು ಕಾರಣವೇನೆಂದೂ, ಇದರಿಂದ ಹೇಗೆ ಬಿಡುಗಡೆ ಹೊಂದಬಹುದೆಂದೂ ಮುಂತಾಗಿ ತನ್ನೊಳಗೆ ತಾನೇ

Digitized by ROJA MUTHIAH RESEARCH LIBRARY

ಚರ್ಚಿಸತೊಡಗಿದನು. ಪ್ರಾಣಿಹಿಂಸೆಯು ಆತನಿಗೆ ಎಷ್ಟು ಮಾತ್ರಕ್ಕೂ ಒಗ್ಗುತ್ತಿರಲಿಲ್ಲ. ಬ್ರಾಹ್ಮಣರು ಮಾಡುತ್ತಿದ್ದ ಯಜ್ಞಯಾಗಾದಿಗಳೂ ಕ್ಷತ್ರಿಯರೂ ವೈಶ್ಯರೂ ಪ್ರತಿಷ್ಠಾಕಾಮರಾಗಿ ದಾನಶೂರರೆಂಬ ಕೇವಲ ಕೀರ್ತಿಯನ್ನು ಘಳಿಸುವಗೋಸುಗ ಬ್ರಾಹ್ಮಣರಿಗೆ ಮಾಡುವ ದಾನಧರ್ಮಗಳೂ ನಿಷ್ಫಲವೆಂದು ಸಂಪೂರ್ಣವಾಗಿ ನಿರ್ಧರಿಸಿಕೊಂಡನು. ಹೀಗಿರುತ್ತಾ ಒಂದು ದಿನ ಅಹೋರಾತ್ರಿ ತನ್ನ ಧರ್ಮಪತ್ನಿಯೂ ಒಂದೇ ಒಂದು ಪುತ್ರರತ್ನವಾದ ಎಳೆಯ ಕೂಸೂ ನಿದ್ರೆಹೋಗುತ್ತಿರುವ ಸಮಯ ತಟ್ಟನೇ ಎದ್ದು ರಾಜ್ಯಾದಿ ಸಕಲ ಸಂಪತ್ತುಗಳನ್ನೂ ಪುತ್ರಕಳತ್ರಾದಿ ಮಿತ್ರ ಬಾಂಧವರನ್ನೂ ಕ್ಷಣಿಕವಾದ ಐಹಿಕ ಸುಖಸಾಧನಗಳೆಂದು ವೈರಾಗ್ಯದಿಂದ ವರ್ಜಿಸಿ, ಆತ್ಮೋದ್ಧಾರಕ್ಕೆ ಕಾರಣಭೂತವಾದ ಸತ್ಯದ ಶೋಧನಾರ್ಥಕ್ಕಾಗಿಯೂ, ಸಾಯುಜ್ಯಕ್ಕೆ ತವರುಮನೆಯಾದ ತತ್ವವಿವೇಚನಕ್ಕಾಗಿಯೂ, ಪರಾರ್ಥ ಸಂಸ್ಕಾರಕ್ಕಾಗಿಯೂ, ತನ್ನ ಮೂವತ್ತನೆಯ ವಯಸ್ಸಿನಲ್ಲಿ ತಲೆಯನ್ನು ಮುಂಡನಮಾಡಿ ಮೈಗೆ ಬೂದಿಯನ್ನು ಬಳಿದು ಕಾವಿ ಶಾಟಿಯನ್ನುಟ್ಟುಕೊಂಡು ಕೈಯಲ್ಲಿ ಕಮಂಡಲವಂ ಧರಿಸಿ ದಕ್ಷಿಣಾಭಿಮುಖವಾಗಿ ಅರಮನೆಯಿಂದ ಹೊರಟುಹೋದನು. ಬರುತ್ತಾ ವಿಂಧ್ಯಾ ಪರ್ವತಗಳಲ್ಲಿದ್ದ ಋಷಿಗಳ ಬಳಿಗೆ ಹೋಗಿ ಅವರಿಂದ ದೀಕ್ಷೆಯನ್ನು ಪಡೆಯಲಪೇಕ್ಷಿಸಿದನು. ಆದರೆ ಅವರ ಗೂಢವಾದ ಉಪದೇಶದಿಂದ ಆತನ ಗಾಢವಾದ ಮನಸ್ಸಿಗೇನೂ ಸಮಾಧಾನವಾಗಲಿಲ್ಲ. ತದನಂತರ ಅರಣ್ಯಗಳಲ್ಲಿ ಅಲೆದಾಡುತ್ತಾ ಸಿಕ್ಕಿದ ಕಂದಮೂಲಾದಿಗಳನ್ನೂ ಹಣ್ಣು ಹಂಪಲುಗಳನ್ನೂ ತಿಂದುಕೊಂಡು ದೇಹಶ್ರಮಪಟ್ಟು ಏಕಾಂಗಿಯಾಗಿ ನಿವಾಂತಸ್ಥಾನದಲ್ಲಿ ಕುಳಿತು ತಪಸ್ಸು ಮಾಡಹತ್ತಿದನು. ಇದರಿಂದಲೂ ಆತನ ಮನಸ್ಸಿಗೆ ಕಿಂಚಿತ್ತಾದರೂ ಶಾಂತಿದೊರಿಯಲಿಲ್ಲ. ಹೀಗೆಯೇ ಆರು ವರುಷಗಳನ್ನು ಕಳೆದು ಕಟ್ಟಕಡೆಗೆ ಗಯೆಯ ಸಮೀಪಕ್ಕೆ ಹೋಗಿ ಅಲ್ಲೊಂದು ಮರದ ಬುಡದ ಕೆಳಗೆ ಗಾಢಾಂಧಕಾರವಾದ ರಾತ್ರಿಯ ವೇಳೆ ಏಕನಿಷ್ಠೆಯಿಂದ ತಪಶ್ಚರ್ಯಕ್ಕೆ ಕೂತಿರಲು ಆತನಿಗೆ ದಿವ್ಯಜ್ಞಾನವು ಬಂದುದು. ನಿರುಪಾದಿಕವಾದ ಅನಂತ ಸುಖಕ್ಕೆ ಕಾರಣ ಭೂತವಾದ ಸಿದ್ಧಾಂತವು ಆತನ ಮನಸ್ಸಿಗೆ ಹೊಳೆಯಿತು. ಅಂದಿನಿಂದ ಆತನು ಯಾವ ಮರದ ಬುಡದಲ್ಲಿ ಕೂತಿದ್ದನೋ ಆ ಮರಕ್ಕೆ ಬೋಧಿವೃಕ್ಷ ಅಂದರೆ ಜ್ಞಾನದ ವೃಕ್ಷವೆಂದು ಹೆಸರು ಬಿತ್ತು. ತದನಂತರ ತನಗುಂಟಾದ ಜ್ಞಾನೋದಯದ ಬೀಜವನ್ನು ಲೋಕದಲ್ಲೆಲ್ಲಾ ಬಿತ್ತಲೋಸುಗ ಅಲ್ಲಿಂದ ದೇಶ ಸಂಚಾರಕ್ಕೆ ಹೊರಟನು.



ಈ ರೀತಿ ಗೌತಮನು ಬಹು ದೀರ್ಘಕಾಲ ಬದುಕಿ, ಜಗತ್ತಿಗೆಲ್ಲಾ "ಅಹಿಂಸಾ ಪರಮೋಧರ್ಮ:" ಎಂಬ ಪ್ರಧಾನತತ್ವವನ್ನು ಬೋಧಿಸಿ, ಜನರು ಸಾಧುಸಜ್ಜನರಾಗಿಯೂ, ಭೂತದಯೆವುಳ್ಳವರಾಗಿಯೂ, ಪರಸ್ಪರ ಪ್ರೀತಿಯುಳ್ಳವರಾಗಿಯೂ ಇರಬೇಕೆಂದು ವಾದಿಸಿದನು. ಮನುಷ್ಯನ ಜೀವಮಾನವೆಲ್ಲಾ ದುಃಖಮಯವಾದುದೆಂದೂ, ಇದಕ್ಕೆ ಆಶೆಯೆಂಬ ಮಾಯಾಪಾಶವೇ ಮೂಲಕಾರಣವೆಂತಲೂ, ಈ ಮಾಯಾಪಾಶದಿಂದುಂಟಾಗುವ ಭವಣೆಗಳಿಂದ ಪಾರಾಗಿ ನಿರ್ವಾಣವೆಂಬ ಮೋಕ್ಷವನ್ನು ಪಡೆಯಲು ತುಚ್ಛವಾದ ಆ ಆಶೆಯನ್ನು ಸಮೂಲವಾಗಿ ವರ್ಜಿಸುವದೇ ಮನುಷ್ಯನ ಮುಖ್ಯ ಕರ್ತವ್ಯವೆಂತಲೂ, ಇದಕ್ಕೆ ಚಿತ್ತಶುದ್ಧಿಯೂ, ಸತ್ಯಶೀಲತೆಯೂ, ಪಾಪರಹಿತವಾದ ಕೃತ್ಯವೂ, ಸ್ವಾರ್ಥತ್ಯಾಗವೂ ಮೂಲಮಂತ್ರಗಳೆಂದೂ ಸಿದ್ಧಾಂತಪಡಿಸಿದನು. ಶಾಶ್ವತಸುಖಕ್ಕೆ ನೇರವಾದ ಸಿದ್ಧಾರ್ಥನ ಈ ಹೃದಯಂಗಮವಾದ ಸಂದೇಶಕ್ಕೆ ಮೆಚ್ಚಿ ಸಜ್ಜನರನೇಕರು ಅವನಂತೆಯೇ ಸರ್ವಸಂಗ ಪರಿತ್ಯಾಗಮಾಡಿ ಅವನ ಅನುಯಾಯಿಗಳಾದರು. ಹಲವು ಮಂದಿ ರಾಜರೂ ವರ್ತಕರೂ ಆತನ ಶಿಷ್ಯರಾದರು. ಇವರಲ್ಲಿ ಕೆಲವರು ನಿರ್ಜನ ಪ್ರದೇಶಗಳಾದ ವನಗಳ ಮಧ್ಯದಲ್ಲೂ ಇನ್ನು ಕೆಲವರು ಪರ್ವತಗಳಲ್ಲಿರುವ ಬಂಡೆಗಳನ್ನು ಕೊರೆದು ಅಲ್ಲಿಯೂ ವಿರಕ್ತಮಠಗಳನ್ನು ಕಟ್ಟಿಸಿ ಅವುಗಳಲ್ಲಿ ತಮ್ಮ ಗುರುವಿನಾಜ್ಞೆಯಂತೆ ಅತ್ಯಂತ ದಕ್ಷತೆಯಿಂದ ಕಾಲಹರಣಮಾಡುತ್ತಿದ್ದರು. ಈ ಪುಣ್ಯಪುರುಷನಾದ ಬುದ್ಧನು ಶುಮಾರು ಕ್ರಿ. ಪೂ. ೪೮೦ರಲ್ಲಿ ಕುಶನಗರವೆಂಬಲ್ಲಿ ಪರಂಧಾಮವನ್ನೈದಿದನೆಂದು ಚರಿತ್ರಕಾರರು ಶಿಲಾಶಾಸನಗಳ ಆಧಾರದಿಂದ ಉಲ್ಲೇಖಿಸುತ್ತಾರೆ. ನಮ್ಮ ಪುರಾಣೇತಿಹಾಸಗಳಲ್ಲಿಯೂ ಬೌದ್ಧಾವತಾರವು ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರವೆಂದೇ ಹೇಳುತ್ತದೆ. ಎಂತೂ ಇಂಥಾ ಮಹಾತ್ಮರು ಈ ಭೂಮಿಯಲ್ಲಿ ಅವತಾರಕ್ಕೆ ಬರುವುದೇ ಅತಿ ವಿರಳ. ಬುದ್ಧಾನುಯಾಯಿಗಳು ಪ್ರಾಚೀನ ಕಾಲದಲ್ಲಿ ಹಿಂದುಸ್ಥಾನದಲ್ಲಿ ಮಾತ್ರವಲ್ಲಾ ಚೀನಾ, ಜಪಾನ್, ತಿಬೇತು, ಸಿಂಹಳದ್ವೀಪ (Ceylon) ಮುಂತಾದ ದೇಶಗಳಲ್ಲಿಯೂ ಹಬ್ಬಿದುದಲ್ಲದೆ ಇತ್ತೀಚೆಗೆ ಜರ್ಮನಿಯಲ್ಲಿಯೂ, ಅಮೇರಿಕಾದಲ್ಲೂ ಬೌದ್ಧಮತವು ಹೆಚ್ಚಿನ ಪ್ರಚುರಕ್ಕೆ ಬಂದಿದೆ.

ಸಿದ್ಧಾರ್ಥನು ಸರ್ವಸಂಗ ಪರಿತ್ಯಾಗಮಾಡಿ ಹೊರಟುಹೋದ ಕೆಲವು ದಿವಸಗಳಲ್ಲಿ ಆತನ ಸಮಭಾಗಿನಿಯಾದ ಯಶೋಧರೆಗೆ ಒಂದು ದಿನ ರಾತ್ರಿ ಒಂದು ಕನಸುಬಿದ್ದುದು. ಆ ಪತಿವ್ರತಾಶಿರೋಮಣಿಗೆ ಪತಿವಿಯೋಗದಿಂದುಂಟಾದ ವಿರಹವೇದನೆಯು ಮತ್ತಷ್ಟೂ ಈ ಸ್ವಪ್ನದಿಂದ ಇಮ್ಮಡಿ

Digitized by ROJA MUTHIAH RESEARCH LIBRARY

ಯಾಗಿ ಪರಿಣಮಿಸಿದರೂ ಆಕೆಯು ಎಳ್ಳಷ್ಟಾದರೂ ಕುಗ್ಗದೆ ಸ್ವಾಮಿಭಕ್ತಿಪರಾಯಣೆಯಾಗಿ ಒದಗಿದ ಕಷ್ಟಗಳನ್ನೆಲ್ಲಾ ಎದೆಗುಂದದೆ ಅನುಭವಿಸಿ ಕಟ್ಟಕಡೆಗೆ ಆತನ ಸಂದೇಶವನ್ನು ಪರಿಗ್ರಹಿಸಿ ತನ್ನ ಪತಿಗನುಕೂಲೆಯಾಗಿ ಆರ್ಯಾವರ್ತದ ಆಧುನಿಕ ಸ್ತ್ರೀಜನಸ್ತೋಮಕ್ಕೆಲ್ಲಾ ಮೇಲ್ಪಂಕ್ತಿಯಾದುದರ ಕಥೆಯನ್ನೇ ಸವಿಸ್ತಾರವಾಗಿ ತಿಳಿಸುವದು ಈ ಐತಿಹಾಸಿಕ ಕಾದಂಬರಿಯ ಮುಖ್ಯೋದ್ದೇಶವು. ಇದನ್ನು ಬರೆದಿಟ್ಟು ಇಂದಿಗೆ ಸುಮಾರು ಎಂಟು ವರುಷಗಳ ಕಾಲವಾದರೂ ಅನೇಕ ತೊಂದರೆಗಳಿಂದ ಇದುವರಿಗೆ ಅದು ವಾಚಕರ ಕೈಗೆ ಸೇರದೆಹೋಯಿತು. ಭಾಷಾಶೈಲಿಯಲ್ಲಾಗಲೀ ಬೇರೆ ತೆರನಿಂದಾಗಲೀ ಇದರಲ್ಲನೇಕ ನ್ಯೂನತೆಗಳು ಇರಬಹುದು. ಆದರೆ, ಹಿಂದುಸ್ಥಾನದಲ್ಲಿ ವಂಗ (ಬಂಗಾಳಿ), ಮರಾಠಿ, ತೆನುಗು ಮುಂತಾದ ಭಾಷೆಗಳು ಈಗೀಗ ಹೊಂದುತ್ತಿರುವ ವಾಙ್ಮಯಾಭಿವೃದ್ಧಿಯನ್ನು ನೋಡಿ, ನಮ್ಮ ಕನ್ನಡಿಗರ ಅಸಡ್ಡೆಯಿಂದಾಗಲೀ ಬೇರೆ ಕಾರಣಗಳಿಂದಾಗಲೀ ಹಿಂದುಳಿದಿರುವ ನಮ್ಮ ಮಾತೃಭಾಷೆಯ ಸೇವೆಯನ್ನು ಮಾಡಬೇಕೆಂಬ ಕುತೂಹಲದಿಂದ, ಮುಖ್ಯವಾಗಿ ಹೆಂಗುಸರಿಗೂ ಹೆಣ್ಣುಮಕ್ಕಳಿಗೂ ಓದಿತಿಳಿಯಲಾಗುವಂತೆ ಆದಷ್ಟು ಶುಲಭ ಶೈಲಿಯಿಂದ ಬರದಿರುವ ಈ ನನ್ನ ಅಲ್ಪ ಗ್ರಂಥಕ್ಕೆ ಕನ್ನಡಿಗರೆಲ್ಲರೂ ತಮ್ಮ ಉದಾರಾಶ್ರಯವನ್ನಿತ್ತು ಪ್ರೋತ್ಸಾಹಿಸುವರೆಂದು ಅತ್ಯಾದರದಿಂದ ಕೋರುತ್ತೇನೆ.

೧೭, ಅಮರ್ವಾಡಿ, ಖತರಾಳಿ,
ಗಿರ್ಗಾಂವ್, ಮುಂಬಯಿ,
ತಾ. ೧ನೇ ಮೇ ೧೯೨೩.

ಎಂ. ಶ್ರೀನಿವಾಸರಾವ್.

# ಸ್ವಪ್ನ-ಫಲ.

"ಸರಿ, ಸ್ವಪ್ನದಲ್ಲಿ ಕಂಡಂಥಾದ್ದೆಲ್ಲಾ ಖರೆಯಾಗಿ ಪರಿಣಮಿಸುವಂತಿದ್ದರೆ ಈ ಕಲಿಯುಗದಲ್ಲಿ ದೇವರೇ ಒಲಿದನೆನ್ನಬೇಕು. ಮಾತೇ! ಭವಾನಿ! ರಾಣೀ ಸಾಹೇಬನವರ ಈ ಸ್ವಪ್ನವು ಒಮ್ಮೆಗೆ ನಿಜವಾಗಿಯೇ ಕೈಗೂಡಲಿ; ಬಯಕೆಯು ಪರಿಪಕ್ವವಾದರೆ ಬರುವ ಮಂಗಳವಾರ ದಿನ ನಾ ನಿನ್ನ ಗುಡಿಯಲ್ಲಿ ಲಕ್ಷದೀಪಗಳನ್ನುರಿಸಿ ಮಹಾಪೂಜೆಯಂಗೈಸುವೆನು. ಈ ಎನ್ನ ಅರಿಕೆಯಂ ಕೈಗೂಡಿಸಿ ಹರಿಕೆಯಂ ಪರಿಗ್ರಹಿಸುವವಳಾಗು."

"ಈ ಕನಸಿನಂತೆಯೇ ನಿರಾತಂಕವಾಗಿ ಪರಿಣಾಮವು ಘಟಿಸುವದೆಂದು ಎನ್ನ ಮನೋದೇವತೆಯು ಬೋಧಿಸುತ್ತಿದೆ. ಆ ಹಾಳು ಸ್ವಪ್ನದ್ದು ನನಗೆ ತೀರಾ ಅನುಭವವಿದೆ; ಹಿಂದೆ ಬಿದ್ದಿಲ್ಲವೋ, ಹಾಳು ಕನಸು! ಸ್ವಪ್ನ ಬಿದ್ದಂತೆಯೇ ನೆರವೇರಿ ಹೋಯಿತೇ? ಸ್ವಪ್ನಗಳು ಬಿದ್ದಂತೆಯೇ ಅವುಗಳ ಫಲವೂ ಸಿದ್ಧಿಸುವಷ್ಟರ ಭಾಗ್ಯ ನನಗೆಲ್ಲಿಯದು? ಪ್ರಿಯಂವದೆ!"

"ಹೀಗೇತಕ್ಕೆ ಮಾತಾಡುತ್ತಿದ್ದೀರಮ್ಮಾ? ನೀವು ಹೀಗೆ ಅಧೀರರಾಗಲೇಕೆ? ಈ ಹೊತ್ತಲ್ಲದಿದ್ದರೆ ನಾಳೆಯಾದರೂ ನಿಮಗೆ ಅವರು ಖಂಡಿತವಾಗಿ ಭೇಟಿಯಾದಾರು."

"ಖಚಿತವೇನೆ? ಖರೆಯಾಗಿಯೂ ಪ್ರಾಣನಾಥನು ನನಗೆ ಭೇಟಿಯಾಗುವರೇ! ನಿನಗೂ ಹಾಗೆಯೇ ಸೂಚಿಸುತ್ತಿದೆಯೇ! ಒಮ್ಮೆಗೆ ಅವರ ದರ್ಶನ ಮಾತ್ರವಾಗಲಿ, ನಂತರ ನೋಡು, ಹೇಗೆ ನಾನು ಅಂಜಲೀಬದ್ಧಳಾಗಿ ನನ್ನ ಮಾಯಾ ಶೃಂಖಲದಿಂದ ಬಂಧಿಸಿ ಬಿಡುವೆನು; ಎಂದೆಂದಿಗೂ ಅವರನ್ನು ಹೋಗಗೊಡೆನು. ಮತ್ತು ಛಲವಿಡಿದು, ಅರಮನೆಗೆ ಬರೋಣಾಗಲೆಂದಾಗಲೀ ಇಲ್ಲವೇ ತನ್ನನ್ನು ಸ್ವಾಮಿಯುವರ

Digitized by ROJA MUTHIAH RESEARCH LIBRARY

ಸಂಗಡಲೇ ಕರದೊಯ್ಯಲಹುದೆಂದಾಗಲೀ ಬೇಡಿಕೊಳ್ಳುವೆನು. ದಾಸಿ! ನನ್ನನ್ನೊಡಗೊಂಡು ಹೋದಾರೇನೇ? (ಭ್ರಾಂತಿಯಿಂದ) ಇದೇನು ಹೀಗೆ? ನಾನು ತಮ್ಮ ಧರ್ಮಪತ್ನಿಯಲ್ಲವೇ? ತಮ್ಮ--"

"ಅಮ್ಮಾ, ಇದೇನು! ಕನಸಿನವಿಷಯ ಇಷ್ಟು ಉದ್ವಿಗ್ನರಾಗಬಹುದೇ?"

"ಆಂ,—ನಾನು ಎಲ್ಲಿದ್ದೇನೆ! ಮಾತಾಡಿ ಮಾತಾಡಿ ಸ್ವಪ್ನದ ಸಂಗತಿಗಳೆಲ್ಲಾ ನನ್ನ ಮುಂದೆ ಅಕ್ಷರಶಃ ನಡೆಯುತ್ತಿವೆಯೆಂದೇ ತೋರುತ್ತೆ, ಮತ್ತು ಏನೇನೋ ಬಾಯಿಗೆ ಬಂದಂತೆ ಒದರಿಯೂ ಹೋಯಿತೆಂತ ಕಾಣುತ್ತೆ. ಆದರೆ ಪ್ರಿಯಂವದೇ, ಕ್ಷಣಿಕವಾದರೂ ನಾನು ಸುಖವೆಂಬ ಮಹಾಸಾಗರದಲ್ಲಿದ್ದೆನು. ನನ್ನ ನೈಜಾವಸ್ಥೆಯನ್ನು ನೆನಪಿಗೆ ತಂದು ಕೊಟ್ಟು ವ್ಯರ್ಥವಾಗಿ ನನ್ನನ್ನು ಚಿಂತೆಗೊಳಪಡಿಸಿದೆ! ಹೇಗೂ, ಕೆಲವು ದಿವಸಗಳಲ್ಲೇ ತನ್ನ ದರ್ಶನವಾದೀತೆಂದು ಸ್ವಾಮಿಯು ಹೇಳಿದ್ದರಲ್ಲೇ? ಹೌದೌದು, ಹಾಗೆಯೋ ನುಡಿದಿದ್ದರು. ಆದರೆ, ಹಾಯ್, ಪ್ರಿಯಂವದೇ, ಅವರು ಕನಸಿನಲ್ಲಿ ಆ ರೀತಿ ಹೇಳಿದ್ದರು. ಆದ್ದರಿಂದ ಕನಸೆಂದರೆ ವಿಶ್ವಾಸಿಸತಕ್ಕದಲ್ಲ; ಅದು ಬರೇ ಮನಸ್ಸಿನ ಭ್ರಮೆ; ಅದಲ್ಲದೆ, ಕನಸಿನಲ್ಲಿ ಅನಿಷ್ಟವನ್ನೇನಾದರೂ ಕಂಡರೆ ಅದು ಇಷ್ಟವಾಗುವುದೆಂದೂ, ಇಷ್ಟವಾದುದನ್ನು ನೋಡಿದರೆ ಅನಿಷ್ಟವಾಗುವುದೆಂದೂ ಲೋಕರೂಢಿಯ ಮಾತಿದೆಯಲ್ಲೇ? ಆದ್ದರಿಂದ ನನಗವರು ದರ್ಶನವಿತ್ತಾರೆಂಬ ನಿನ್ನ ಲವಲವಿಕೆಯ ಮಾತಿನಮೇಲೆ ಭರವಸವು ಹೇಗೆ?''

ಸ್ವಲ್ಪ ವೇಳೆ ಇಬ್ಬರೂ ಚಿತ್ತವಿಕಾರದಿಂದಲೂ ಚಿಂತಾನಲ ಬೇಗೆಯಿಂದಲೂ ಪೀಡಿತರಾಗಿ ಧಾರಾಳವಾಗಿ ಕಂಬನಿಗರೆಯುತ್ತಾ ಸ್ತಬ್ಧರಾಗಿ ಕುಳಿತರು. ನಂತರ ಯಶೋಧರೆಯು ನಿಟ್ಟುಸುರನ್ನು ಬಿಟ್ಟು, "ಪ್ರಿಯಂವದೇ, ಈವತ್ತು ಏನಂತಿಲ್ಲ, ನನಗೆ ಕಿಂಚಿತ್ತಾದರೂ ಆಹ್ಲಾದ ಸೂಚಿಸುವುದೇ ಇಲ್ಲ. ಮುಂದಕ್ಕೇನಾದರೂ ಲಾಭಾಸ್ಪದವಾದ ಕಾರ್ಯಕ್ಕೆ ಕೈ ಚಾಚಿದವನಂತೆ ಚಿತ್ತಸ್ಥೈರಣೆ ಯಿಲ್ಲದೆ ಒಂದೇ ಪ್ರಕಾರ ಕಳವಳವೂ ಸಂಕೋಚವೂ ತಲೆದೋರಿದೆ. ಆದುದರಿಂದ, ಈ ಸಾಯಂಕಾಲ ಕಿಶೋರ



ವನದ ಉತ್ತರ ಪಾರ್ಶ್ವಕ್ಕೆ ಹೋಗಿ ಅಲ್ಲಿಯ ಏಕಾಂತಸ್ಥಳದಲ್ಲಿ ಕುಳಿತು (ಈ ಅಖಿಲಾಖಿಲ ಕೋಟಲೆಗಳಿಗೊಳಪಟ್ಟ) ಆಯುಷ್ಯದ ಒಂದೆರಡು ತಾಸನ್ನು ಅಲ್ಲಾದರೂ ಕಳೆಯಬೇಕೆಂದಿರುತ್ತೇನೆ; ಅಲ್ಲಿ ಅನನ್ಯಭಾವದಿಂದ ಪರಮೇಶ್ವರನನ್ನು ಕುರಿತು, "ಹೇ, ಪ್ರಭೋ, ದಯಾಘನಾ! ನನ್ನ ಪಾಡೇನಾದರೂ ಚಿಂತೆಯಿಲ್ಲ; ಆದರೆ ನನ್ನ ಪ್ರಾಣೇಶ್ವರನಾದ ರಾಜಕುಮಾರನನ್ನು ಮಾತ್ರ ಸದಾ ಕಾಪಾಡುತ್ತಿರು.'' ಹೀಗೆಂದು ವಂದನಾ ಪೂರ್ವಕವಾಗಿ ಪ್ರಾರ್ಥಿಸುವೆನು.

ಒಮ್ಮಿಂದೊಮ್ಮೆ ಯಶೋಧರೆಗೆ ಮಾತ್ರವಲ್ಲಾ, ತೀರಾ ಕಪಿಲವಸ್ತು ನಗರದ ಜನಸ್ತೋಮಕ್ಕೂ ಸಿದ್ಧಾರ್ಥನ ಪಲಾಯನವು ದುಃಖಾಸ್ಪದವಾಗಿ ಪರಿಣಮಿಸಿತು. ಕುಮಾರ ಸಿದ್ಧಾರ್ಥನು ಸಕಲ ಮಾಯಾಪಾಶಗಳನ್ನು ವಿಚ್ಛಿನ್ನಗೈದು ಪ್ರಚಂಡವಾದ ರಾಜ್ಯಕ್ಕೂ ನಶ್ವರವಾದ ಐಹಿಕ ಸುಖಕ್ಕೂ ತಿಲೋದಕವನ್ನರ್ಪಿಸಿ ಏಕಾಏಕಿ ಅದೃಶ್ಯವಾದುದು ಸಕಲರಿಗೂ ವಿಷಾದವನ್ನೂ ವಿಸ್ಮಯವನ್ನೂ ತಂದೊಡ್ಡುದುದು. ಲೋಕದಲ್ಲಿ ಮಹಾ ಪ್ರಸಾದವೆಂದೆಣಿಸುವ ಇಹಸಾಧನೆಗೆ ಆವಶ್ಯಕವಾದ ಬಗೆಬಗೆಯ ಪದಾರ್ಥಗಳು ಪ್ರತಿನಿತ್ಯವೂ ಸಿದ್ಧಾರ್ಥನ ಪರಿಗ್ರಹಕ್ಕೆ ಅಣಿಮಾಡಲ್ಪಟ್ಟು ಆತನ ಸ್ವೀಕಾರವನ್ನು ನಿರೀಕ್ಷಿಸುತ್ತಿದ್ದರೂ ಸಿದ್ಧಾರ್ಥನಿಗೆ ಮಾತ್ರ ಮೊಟ್ಟಮೊದಲಿಂದಲೇ ಲೌಕಿಕ ಸುಖದ ವಾಸನೆಯು ಲವಲೇಶವಾದರೂ ಒಗ್ಗುತ್ತಿರಲಿಲ್ಲ. ಆದುದರಿಂದ ಆತನು ಈ ಲೋಕಾರ್ಹವಾದ ಪದಾರ್ಥಗಳನ್ನೂ ಸಕಲೈಶ್ವರ್ಯವನ್ನೂ ಅಣುಮಾತ್ರವೂ ಮಾನಿಸುತ್ತಿರಲಿಲ್ಲ. ಅಮೋಘವಾದ ಸಾಮ್ರಾಜ್ಯ, ಅಪರಿಮಿತವಾದ ಸಂಪತ್ತು, ತನ್ನ ಜನ್ಮಭೂಮಿಯಾಗಿ ಪೂರ್ವಜರಿಂದಲೂ ಪ್ರಖ್ಯಾತಿ ಹೊಂದಿ ಆರಾಮವನದೋಪಾದಿ ಕಂಗೊಳಿಸುತ್ತಿದ್ದ ಸುಂದರವಾದ ತನ್ನ ನಿವಾಸಸ್ಥಾನ, ಪೂರ್ಣಿಮೆಯ ಚಂದ್ರನಂತೆ ಕಾಂತಿಯುಕ್ತವಾಗಿ ಒಪ್ಪುತ್ತಿರುವ ಪುತ್ರರತ್ನ, ಅಂತೂ ರೂಪಲಾವಣ್ಯದಲ್ಲಿ ಲಕ್ಷ್ಮೀದೇವಿಯನ್ನೂ ಜರೆಯುತ್ತಿರುವ ಸುಶೀಲೆಯಾದ ಯಶೋಧರೆಯೆಂಬ ತನ್ನ ಅರ್ಧಾಂಗಿ, ಇವೆಲ್ಲವನ್ನೂ

Digitized by ROJA MUTHIAH RESEARCH LIBRARY

ಧಿಕ್ಕರಿಸಿ ತೊಲಗಲಿಕ್ಕೆ ಆತನ ಮನಸ್ಸಾಕ್ಷಿಯು ರವಷ್ಟಾದರೂ ಹೇಸಲಿಲ್ಲ. ಈ ಅಸ್ಥಿರವಾದ ಭೂಮಿಯಲ್ಲಿ ರಾಜಮಕುಟಧಾರಣಕ್ಕಿಂತಲೂ, ಪರಲೋಕದ ಅಚಲ ಜ್ಯೋತಿರ್ಮಯವಾದ ಸಿಂಹಾಸನದ ಮಾರ್ಗವನ್ನು ತೋರಿಸುವ ಜನಕಲ್ಯಾಣಾರ್ಥಕವಾದ ಯತ್ನ ಮತ್ತು ಸತ್ಯದ ಶೋಧನೆ ಇವುಗಳಲ್ಲೇ ಆತನಿಗೆ ಅತ್ಯಾಸಕ್ತಿ ಉಂಟಾಯಿತು. ಸತ್ಯ ಧರ್ಮದ ಮರ್ಮವನ್ನು ಗೊತ್ತುಹಿಡಿಯ ಬೇಕೆಂದೂ ಸನ್ಮಾರ್ಗದ ಗತಿಯನ್ನು ಸೂಚಿಸಿ ಅದನ್ನವಲಂಬಿಸುವಂತೆ ಜನರಿಗೆ ಬೋಧಿಸಬೇಕೆಂದೂ ಪದೇಪದೇ ಅಧೋಗತಿಯನ್ನನುಸರಿಸಿ ನರಳುತ್ತಿರುವ ಮಾನವ ಜಾತಿಯ ಉದ್ಧಾರಕ್ಕಾಗಿ ಸತ್ಯಧರ್ಮೋಪದೇಶವನ್ನು ಪ್ರಸಂಗಿಸುತ್ತಾ ಭೂಲೋಕ ಸಂಚಾರವಂ ಮಾಡಬೇಕೆಂದೂ ಅವನ ಕುತೂಹಲವು ದಿನೇ ದಿನೇ ಪ್ರಬಲಿಸಿ, ಈ ಕಾಂಕ್ಷೆಯನ್ನು ಪೂರೈಸಿಕೊಳ್ಳಲು—ಈ ಅಜ್ಞಾನಾಂಧಕಾರಮಯವಾದ ಜಗತ್ತಿನಿಂದ ಪ್ರಕಾಶಮಾನವಾದ ಪರಂಧಾಮವನ್ನೈದುವ ಪ್ರಯುಕ್ತ—ಕುಮಾರ ಸಿದ್ಧಾರ್ಥನು ತನ್ನ ಆಪ್ತೇಷ್ಟರನ್ನು ಅಸಹ್ಯವಾದ ದುಃಖಕ್ಕೀಡು ಮಾಡಿ ಬಿಟ್ಟು ಒಂದಾನೊಂದು ರಾತ್ರಿ ಯಾರಿಗೂ ತಿಳಿಯದಂತೆ ರಾಜಗ್ರಹದಿಂದ ನೆಟ್ಟನೆ ಹೊರಟುಹೋದನು. ಕುಮಾರನು ಅದೃಶ್ಯವಾದನೆಂಬ ಸುದ್ದಿಯಂ ಕೇಳಿದಾಕ್ಷಣವೇ ರಾಜನಾದ ಶುದ್ಧೋದನನಿಗೆ ಅಪಾರವಾದ ದುಃಖವು ಪ್ರಾಪ್ತವಾಯಿತು. ಯಶೋಧರೆಗಂತೂ ತನ್ನ ಕಾಂತನು ಸಂಸಾರದಿಂದ ಚ್ಯುತನಾದುದನ್ನು ಕೇಳಿ ವಿದ್ಯುಲ್ಲತೆಯ ಘಾತವಾದಂತೆ ಆಕೆಯು ಮೂರ್ಛಾಕ್ರಾಂತಳಾದಳು, ಆಕೆಯ ಹೃದಯವು ತಲ್ಲಣಿಸಹತ್ತಿತು. ಸಮಯಾಂತರದಲ್ಲಿ ಚೇತರಿಸಿಕೊಂಡು ಪತಿಯ ವಿರಹವನ್ನು ನೆನನೆನದು ಪ್ರಲಾಪಿಸಲಾರಂಭಿಸಿದಳು; ಆದರೆ ನಿಷ್ಫಲ! ಕುಮಾರ ಸಿದ್ಧಾರ್ಥನು ಧರ್ಮದ ಶೋಧನಾರ್ಥಕ್ಕಾಗಿ ಬಹುದೂರ ಪ್ರಯಾಣಿಸಿಬಿಟ್ಟನು; ತನ್ನ ಭಾರ್ಯೆಯ ಅನುಚಿತವಾದ ಸಂತಾಪಕ್ಕೆ ಕರಗಿ ಹಿಂತಿರುಗುವಷ್ಟು ಚಾಪಲ್ಯಚಿತ್ತನಾಗಿರಲಿಲ್ಲ.



ಪ್ರಿಯ ಪತಿಯ ವಿರಹವೇದನೆಯಿಂದ ಬಳಲುತ್ತಿರುವಾಗ ಯಶೋಧರೆಯು ಒಂದಾನೊಂದು ರಾತ್ರಿ ಸುಪ್ತಾವಸ್ಥೆಯಲ್ಲಿ ಒಂದು ಕನಸಂ ಕಂಡಳು. ಸ್ವಪ್ನವೇನೋ ಸುಖಸೂಚಕವಾಗಿದ್ದಿತು; ಆದರೆ ಮನೋಲ್ಲಾಸಕರವಾದ ಈ ಕನಸಂ ಕಂಡು ಮನಶ್ಶಾಂತಿಯಾಗುವ ಪ್ರತಿಯಾಗಿ ಯಶೋಧರೆಗೆ ಕಳವಳ ಮಾತ್ರ ಹೃದಯದಲ್ಲಿ ಅಂಕುರಿಸಿತು. ಆಕೆಗೆ ಏನೊಂದೂ ತೋಚದಂತಾಯಿತು, ಆಕೆಯ ಉತ್ಕಂಠವು ವೃದ್ಧಿಯಾಗುತ್ತೆ ಬಂದುದು, ಪತಿದರ್ಶನವನ್ನೇ ಹಂಬಲಿಸುತ್ತಾ ಕೂತಳು. ಹಗಲಿರುಳೆಲ್ಲಾ ಕನಸಿನ ವಿಷಯವಾಗಿಯೇ ಯೋಚಿಸುತ್ತಾ ಕೂತಿದ್ದುದರಿಂದ ಅದು ಕನಸೆಂದು ತೋರದೆ ಕಂಡಂತೆ ನಡೆದ ವೃತ್ತಾಂತವೆಂದೇ ಆಕೆಗೆ ಭ್ರಮಣವಾದುದು. ಇಂಥಾ ವಿಚಾರತರಂಗದಲ್ಲಿ ಮಗ್ನವಾಗಿದ್ದಾಗಳೆಲ್ಲಾ ಆಕೆಯ ಚಿತ್ತವು ವಿಕಾಸವಾಗಿ ಮಧ್ಯೆ ಮಧ್ಯೆ ಆಕ್ಷೇಪಕರವಾದ ಒಂದೊಂದು ಮಾತೂ ಬಾಯಿಯಿಂದ ಹೊರಡುತ್ತಿದ್ದಿತು; ಆಕೆಯ ದೂತಿಯಾದ ಪ್ರಿಯಂವದೆಯು ಯಶೋಧರೆಯ ನಿಜಾವಸ್ಥೆಯನ್ನು ಜ್ಞಾಪಕಗೊಳಿಸಿ ಆಕೆಯ ಸ್ಮೃತಿಯನ್ನು ಎಚ್ಚರಗೊಳಿಸುತ್ತಿದ್ದಳು. ಕಟ್ಟಕಡೆಗೆ ಆ ಸ್ವಪ್ನದಿಂದ ಆಕೆಗೆ ಹುಚ್ಚು ಹಿಡಿಯುವಂತಾಯಿತು. ಹೀಗೆಲ್ಲಾ ಆಕೆಯ ತನುಮನವನ್ನು ವಿಕಾರಗೈಸಿದ ಆ ಕನಸಿನಲ್ಲಿ ಅವಳು ಏನನ್ನು ನೋಡಿರಬಹುದು? ಬೇರೇನು ಕಂಡಿದ್ದಾಳು? ಆ ಸುಖಕರವಾದ ಸ್ವಪ್ನದಲ್ಲಿ ಸಿದ್ಧಾರ್ಥನು ಎದುರುಗೊಂಡು ತಾನು ಯಶೋಧರೆಗೆ ಬೇಗನೇ ದರ್ಶನಕೊಡುವನಾಗಿ ಅಮೃತಸಮಾನವಾದ ಆಶ್ವಾಸನವನ್ನಿತ್ತಿದ್ದನು.

ಈ ದಿನ ಸಂಜೆಯ ಸಮಯವಾಗಿದ್ದಿತು. ಪಶ್ಚಿಮಾಂಗನೆಯು ಸ್ವಲ್ಪ ಮೊದಲು ಪ್ರಜ್ವಲಿಸುತ್ತಿದ್ದ ಬಾಲಾರ್ಕ ಕಿರಣಗಳ ವಿಯೋಗದಿಂದ ಮ್ಲಾನವಾಗಿದ್ದಳು ಸ್ಫಟಿಕದಂತೆ ಶುಭ್ರವಾಗಿದ್ದ ನಭಾಮಂಡಲವು ಈಗ ಬಿಸಲಿನ ತಾಪದ ದೆಸೆಯಿಂದಲೋ ಅಥವಾ ಅಶುಭಸೂಚಕವಾಗಿ ಕೂಗುವ ಗೂಬೆಗಳ ಧ್ವನಿಯನ್ನು ಕೇಳಿ ರೋಷೋತ್ಫುಲ್ಲವಾಗಿದ್ದಿತೋ ಎಂಬಂತೆ ಕಪ್ಪೇರಿತ್ತು. ಹಗಲೆಲ್ಲಾ ಪರ್ವತಶ್ರೇಣಿಗಳ ಸಂದಿನಲ್ಲಿ ಅಡಗಿದ್ದ ರಜನೀ

Digitized by ROJA MUTHIAH RESEARCH LIBRARY

ದೇವಿಯು ತಾರಾಮಣಿಗಳಿಂದ ಪರಿಭೂಷಿತೆಯಾಗಿ—ಸಿದ್ಧಾರ್ಥನ ಆಗಮನವನ್ನು ನಿರೀಕ್ಷಿಸುತ್ತಾ ಸೌಧಾಗ್ರದ ಕೊಠಡಿಯೊಂದರಲ್ಲಿ ಆಶಾಬದ್ಧಳಾಗಿ ಕುಳಿತಿದ್ದ ಈ ನಮ್ಮ ಸಾಧ್ವಿ ಯಶೋಧರೆಗಿಂತಲೂ—ಇಮ್ಮಡಿ ಶೋಕಾಕ್ರಾಂತಳಾಗಿ ತನ್ನ ರಮಣನಾದ ಚಂದ್ರಮನ ಬರವನ್ನೇ ಇದಿರುನೋಡುತ್ತಿದ್ದಳೋ ಎಂಬಂತೆ ಅಂಧಕಾರವು ಭೂತಲವನ್ನು ಕವಿದಿದ್ದಿತು.

"ಹಾ! ದಯಾಘನಾ! ಪ್ರಭೋ!" ಹೀಗೆಂದು ಯಶೋಧರೆಯು ಆಕಾಶದಕಡೆಗೆ ಕಣ್ಣೆತ್ತಿ ತನ್ನೊಳಗೆನೇ ಗುಣುಗುಟ್ಟಹತ್ತಿದಳು. "ಅಯ್ಯೋ, ದೇವರೇ! ನಾನು ಪೂರ್ವಜನ್ಮದಲ್ಲೇನೋ ಮಹಾಪಾತಕವನ್ನೆಸಗಿದ್ದಿರಬಹುದು; ಪ್ರಾಯಶಃ ಈ ಜನ್ಮದಲ್ಲಿ ಪತಿವಿಯೋಗವೇ ಅದರ ಪ್ರತಿಫಲವಾಗಿ ನನ್ನನ್ನು ಸುತ್ತಿರುವುದು. ಹಾ! ಹಾ! ದೀನದಯಾಳೂ, ನಿನ್ನ ಮುಂದೆ ಶಿರಗೊಡ್ಡಿ ಬೇಡುತ್ತಿರುವ ಈ ಬಾಲಕಿಯಲ್ಲಿ ಲೇಶವಾದರೂ ಕೃಪಾಕಟಾಕ್ಷವನ್ನು ಬೀರು; ಬೇರೆ ಯಾವ ಶಿಕ್ಷೆಯನ್ನು ವಿಧಿಸಿದರೂ ಅನುಭವಿಸಲಿಕ್ಕೆ ಈ ನಿನ್ನ ಕಿಂಕರಳು ಸಿದ್ಧವಾಗಿದ್ದಾಳೆ; ಆದರೆ, ಹೇ, ನಾರಾಯಣಾ! ಈ ಅಮೋಘವಾದ ಯಾತನೆ ಬೇಡಾ, ಎನ್ನನ್ನು ಪತಿವಿರಹಿತೆಯನ್ನಿಸಬೇಡ." ಹೀಗೆಂದು ನಿಟ್ಟುಸುರನ್ನು ಬಿಟ್ಟು, "ಮೃದುಶಯ್ಯೆಯ ಮೇಲೆ ಮಲಗಿ ಸುಖನಿದ್ರೆಯನ್ನು ಗೈದು ಆನಂದಪಡುತ್ತಿದ್ದ ರಾಜಕುಮಾರನಿಗೆ ಈಗ ಕಾಡುಗುಡ್ಡಗಳ ಪ್ರವಾಸವು ಎಂತು ಸಹನವಾದೀತು? ಅವರೆಲ್ಲಿ ಕಲ್ಲುಮುಳ್ಳುಗಳ ಮೇಲೆ ಅಲೆದಾಡುತ್ತಿದ್ದಾರೋ? ಸಕಾಲದಲ್ಲಿ ಅನ್ನಪಾನಾದಿಗಳು ದೊರೆಯುತ್ತಿದೆಯೋ ಏನೋ? ಅಥವಾ ಅವರ ಗತಿ ಏನಾಗಿರಬಹುದೋ ಯಾರು ಬಲ್ಲರು! ಅವರ ಪಾಡನ್ನು ನೆನಸಿದಾಗಲೆಲ್ಲಾ ನನ್ನ ಅಂತಃಕರಣವು ಸಹಸ್ರಹೋಳಾಗಿ ಉಣ್ಣುವ ಅನ್ನವು ವಿಷಪ್ರಾಯವಾಗಿ ತೋರುತ್ತಿದೆ; ವಿಶ್ರಾಮವನವು ಸ್ಮಶಾನದೋಪಾದಿ ಭಯಾಸ್ಪದವಾಗಿ ಕಂಗೊಳಿಸುತ್ತಿದೆ. ನಾಥ, ನಾನು ಒಮ್ಮೊಮ್ಮೆ ದಣಿದಿದ್ದರೆ— ಆಹಾ, ನಿನಗೆಷ್ಟು ಶ್ರಮವಾಯಿತು— ಹೀಗೆಂದು ಪ್ರಶ್ನಿಸಿ ನನ್ನ ಬೆನ್ನನ್ನು ಸವರಿ ಮೊಗದ ಮೇಲಿಂದ ಬೆವರಿನ ಹನಿಗಳನ್ನು ಕೋಮಲವಾದ



ತನ್ನ ಕರಪಲ್ಲವಗಳಿಂದೊರಸಿ ಮಂದಸ್ಮಿತಗಳಿಂದೆನ್ನನ್ನು ಹರ್ಷಪಡಿಸಲಿಕ್ಕೆ ಯತ್ನಿಸುತ್ತಿದ್ದಿರಲ್ಲವೇ? ಹೃದಯೇಶಾ, ಅಂಥಾ ನಿಮ್ಮ ದಯಾರ್ದ್ರವಾದ ಹೃದಯೋತ್ಪಲವು ಈಗೆಂತು ಪಾಷಾಣರೂಪವಾದುದು? ವಲ್ಲಭಾ! ಲೋಕದಲ್ಲಿ ಸ್ತ್ರೀಯರೇ ಚಂಚಲೆಯರೆಂದೆನ್ನುವರಲ್ಲವೇ? ಈಗ ಪುರುಷವರ್ಗವೂ ಹಾಗಾಗತೊಡಗಿತೇ? ಅಂದರಿನ್ನು ಗುಣಾವಗುಣಗಳಲ್ಲಿ ಸ್ತ್ರೀಪುರುಷರ ವ್ಯತ್ಯಾಸವಳಿಯಿತೇ? ಹೇಗೆಂದು ಹೇಳಲಿ? ಪ್ರಿಯಕರಾ, ಈ ದಾಸಿಯಲ್ಲೇಕಿಂತು ಉದಾಸೀನತೆ ಉತ್ಪನ್ನವಾಯಿತು? ನನ್ನಿಂದೇನಾದರೂ ಅಪರಾಧ ಸಂಭವಿಸಿತೇ? ಹಾಗಿದ್ದರೆ, ಒಂದಲ್ಲ, ನೂರಾರು ಬಾರಿ ಶಿರಗೊಡ್ಡಿ ಕ್ಷಮೆ ಬೇಡುತ್ತಿದ್ದೇನೆ. ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತವಿಲ್ಲವೇ? ಒಮ್ಮೆ ನನ್ನಲ್ಲಿ ಪ್ರಸನ್ನರಾಗಿ. ತಮ್ಮ ಮುಖಾವಲೋಕನದಿಂದಲೇ ಕೃತಾರ್ಥಳಾಗಿ ಸಂತುಷ್ಟಿಯಾಗುವೆನು; ಇತರ ಸ್ತ್ರೀಯರಂತೆ ನಾನು ವಸ್ತ್ರಾಭರಣಗಳಿಂದ ಭೂಷಿತೆಯಾಗಿರಲು ಇಚ್ಛೈಸಲಾರೆ; ನನಗೆ ಧನಸಂಪತ್ತು ಬೇಡ; ಆಡಂಭರ ಸುಡಲಿ; ಪ್ರಾಣೇಶ್ವರನೇ ನನ್ನ ಸಕಲವು; ನನ್ನ ಐಶ್ವರ್ಯವು; ನಿಮಗಿಂತ ನನಗೆ ಬೇರೆ ದೈವವಿಲ್ಲ. ಮನೋವಾಕ್ಕಾಯಗಳಿಂದಲೂ ನಿಮ್ಮನ್ನೇ ನಂಬಿರುವ ಈ ದಾಸ್ಯಾನುದಾಸಿಗೆ ಸು-ಮಂಗಳವಾದ ತಮ್ಮ ದರ್ಶನವನ್ನೀಗಿ ಉದ್ಧರಿಸಬಾರದೇ? ಅಷ್ಟಾದರೂ ನನಗೆ ಶ್ರೇಯಸ್ಕರವು. ಹಾ ಹಾ, ನನ್ನ ಕಲ್ಪದ್ರುಮವೇ, ಒಂದಾನೊಂದು ದಿನ ವಿಹಾರಾರ್ಥಕ್ಕಾಗಿ ನಾವಿಬ್ಬರೂ ಅರಮನೆಯ ಎದುರ್ಗಡೆಯಲ್ಲಿರುವ ಉದ್ಯಾನಕ್ಕೆ ಹೋಗಿದ್ದ ವೇಳೆ ಅಲ್ಲೊಂದು ಆಮ್ರವೃಕ್ಷದ ಮೇಲೆ ಕುಳಿತು ಒಂದು ಹೆಣ್ಣು ಚಕ್ರವಾಕವು ತನ್ನ ಜೊತೆಯ ಗಂಡು ಚಕ್ರವಾಕಕ್ಕಾಗಿ ಕೂಗುತ್ತಿರಲು, ಆಗ ತಾನೇ ನೀವು,— ಎಂಥಾ ಕಲ್ಲೆದೆಯುಳ್ಳುದೋ ಈ ಗಂಡು ಚಕ್ರವಾಕವು! ಅಯ್ಯೋ, ಪಾಪ! ಹೆಣ್ಣು ಚಕ್ರವಾಕವು ಇಷ್ಟು ಗೋಳಾಡುತ್ತಿದ್ದರೂ ಆ ನಿಷ್ಟುರವಾದ ಗಂಡು ಹಕ್ಕಿಯು ಈಚೆಗೆ ತಿರಿಗಿ ನೋಡುವುದೇ ಇಲ್ಲ, ಅದಕ್ಕೆ ಧಿಕ್ಕಾರವಿರಲಿ!—ಹೀಗೆಂದು ಪ್ರತಿಪಾದಿಸಲಿಲ್ಲವೇ? ಆಗ್ಗಿನ ನಿಮ್ಮ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿತವಾಗುತ್ತಿವೆ! ಕು

Digitized by ROJA MUTHIAH RESEARCH LIBRARY

ಮಾರಾ, ನಾನು ನಿಮ್ಮ ಧರ್ಮಪತ್ನಿಯಲ್ಲವೇ? ನಾನೂ ನಿಮ್ಮ ಪ್ರೇಮಾಸ್ಪದಳಾದ ಯಶೋಧರೆಯಲ್ಲವೇ? ಹಾ! ಹಾ! ಇವೆಲ್ಲಾ ನಿಮಗೆ ಹೇಗೆ ಮರೆತುಹೋದುದು? ನಾನು ನಿಮ್ಮ ಸಂಗಡಲೇ ವನಾಂತರಗಳಲ್ಲಿ ಅಲೆದಾಡೇನು, ಉಪವಾಸ ಕಳದೇನು, ಒದಗಿದಾಪತ್ತುಗಳನ್ನೆಲ್ಲಾ ತಿಲಪ್ರಾಯವಾಗಿ ಕಾಣುವೆನು; ಮಹನೀಯಾ! ಆದರೆ ನನಗೆ ನಿಮ್ಮನ್ನಗಲಿ ಜಗತ್ತೇ ಶೂನ್ಯ; ಜೀವಿತವೇ ಭಾರ. ತಾವೇನು ಅರ್ಧಾಂಗಿಯನ್ನು ಮರತೇ ಬಿಡುವಿರೇ; ಇದರಂತೆಯೇ ಎನ್ನನ್ನು ನಿತ್ಯ ನಿರಾಶೆಗೂ ವಿರಹಾಗ್ನಿಗೂ ತಳ್ಳಿಬಿಡುವಿರೇ? ನೀವು ನನ್ನನ್ನು ಮರೆತು ಇರಲಾಪಿರಿ; ಆದರೆ, ಹಾಯ್ ನಾಥ, ನಾನು ನಿಮ್ಮನ್ನೆಂತು ಮರೆಯಲಿ!"

ಯಶೋಧರೆಯು ನಿಟ್ಟುಸುರು ಬಿಟ್ಟು ಕೊಂಚವೇಳೆ ತಟಸ್ಥಳಾದಳು; ಆದರೆ ಆಕೆಯ ನೇತ್ರದ್ವಯವು ಬಾಷ್ಪಪೂರಿತವಾಗಿ ಅಮಾವಾಸೆಯ ಚಂದ್ರನೋಪಾದಿ ಮುಖವು ಬಾಡಿದ್ದಿತು. ಅವಕಾಶ ದೊರೆತಾಗಲೆಲ್ಲಾ ಸ್ವಾಮಿ ಭಕ್ತಳೂ ಮೃದುಭಾಷಿಣಿಯೂ ಆದ ಪ್ರಿಯಂವದೆಯು ತನ್ನ ಯಜಮಾನಿಯ ಹೃದಯಂಗಮವಾದ ಶೋಕದ ನಿವಾರಣಾರ್ಥಕ್ಕಾಗಿ ಅನೇಕ ನೀತಿಯ ವಾಕ್ಯಗಳಿಂದ ಯಶೋಧರೆಯನ್ನು ಉಪಚರಿಸುತ್ತಿದ್ದಳು. ಈ ನೆವದಿಂದ ಪ್ರಿಯಂವದೆಯು, "ನೀವು ಹೀಗೇತಕ್ಕೆ ಮಾಡುವಿರಮ್ಮಾ? ಕುಮಾರನು ಯಾವುದೋ ಮೇಲ್ಮೆಯ ಕಾರ್ಯನಿಮಿತ್ತವಾಗಿ ಹೊರಟುಹೋಗಿರಬಹುದು. ಪತಿಯು ಒಂದೆರಡು ವಾರ ಮನೆಯಲಿಲ್ಲವೆಂದು ಪತ್ನಿಗಿಷ್ಟು ದುಗುಡವೇ? ಎಂಥಾ ಮರುಳುತನ! ಅವರೇನೋ ಮಹಾ ವಿವೇಕಿ; ಪಿತ್ರಾಜ್ಞೆಯನ್ನೆಂದೂ ಉಲ್ಲಂಘಿಸುವವರಲ್ಲ. ಈಶ್ವರ ಕೃಪೆಯಿಂದ ಕೆಲವು ದಿವಸಗಳಲ್ಲಿಯೇ ಸುರಕ್ಷಿತವಾಗಿ ಹಿಂತಿರುಗಿ ಬಂದಾರು'' ಎಂದು ಸವಿನಯದಿಂದ ಹೇಳುತ್ತಿದ್ದಳು.

ಯಶೋಧರೆಯು ಈ ಮಾತಂ ಕೇಳಿ ಬೇಸತ್ತವಳಂತೆ "ಪ್ರಿಯಂವದೇ, ಈ ನಿನ್ನ ಉಪಚಾರವೂ ಮರೀಚಿಯಂತಿರುವ ಊಹನೆಯೂ ತೀರಾ ನಿರರ್ಥಕ. ಕುಮಾರನ ಉದ್ದೇಶವು ನನಗೆ ತಿಳಿದೇ ಇದೆ; ಅವರು

Digitized by ROJA MUTHIAH RESEARCH LIBRARY



ನಮ್ಮನ್ನೆಲ್ಲಾ ತ್ಯಜಿಸಿ ಧರ್ಮಾರ್ಜನೆಯ ಉದ್ದಿಶ್ಯ ಹೋಗಿರುತ್ತಾರೆ; ಆ ಧರ್ಮ ಸಾಧನೆಯ ಮೂಟೆಯನ್ನು ಕಟ್ಟಿಕೊಂಡು ಮರಳಿ ಅರಮನೆಯನ್ನು ಸೇರಿ ಸಂಸಾರವೆಂಬ ಶರಧಿಯಲ್ಲಿ ಎಂದೂ ಬೆರೆಯುವವರಲ್ಲ.''

''ಎಂದಿಗೂ ಬರುವವರಲ್ಲವೇ''? ನಿಮ್ಮ ಪರವಾಗಿಯಾದರೂ ಬರಲೊಲ್ಲರೇ?''

''ಎಷ್ಟು ಮಾತ್ರಕ್ಕೂ ಇಲ್ಲ.''

''ಅವರಿಷ್ಟು ನಿಷ್ಠೂರರೇ''?

''ಛೀ, ಛೀ, ಪ್ರಿಯಂವದೇ, ಹಾಗಲ್ಲ, ನೀನು ತಪ್ಪಿದೆ. ಅವರಲ್ಲಿ ಎಳ್ಳಷ್ಟಾದರೂ ನಿಷ್ಟುರತೆ ಇಲ್ಲ; ಪ್ರತಿಯಾಗಿ, ಅವರ ಮನೋವೃತ್ತಿಯು ಚಂದ್ರಕಾಂತ ಶಿಲೆಯೋಪಾದಿ ಮಾರ್ದವವುಳ್ಳುದು; ಆದ್ದರಿಂದ ಅವರಲ್ಲಿ ಅಂಥಾ ದೋಷವನ್ನಾರೋಪಿಸಲಾಗದು.''

''ಮತ್ತೆ?''

''ಮತ್ತೇನು? ನನ್ನ ಪ್ರಾರಬ್ಧ; ಇನ್ನೇನೆಂದು ಹೇಳಲಿ?'' ಈ ಜನ್ಮದಲ್ಲಿ ಅವರ ಚರಣಸೇವೆಯು ಅವಸಾನಾಂತರ ಲಭಿಸಲಿಲ್ಲದ್ದರಿಂದ ಮುಂದಣ ಜನ್ಮದಲ್ಲಾದರೂ ಪ್ರಾಪ್ತಿಯಾಗುವಂತೆ ಅವರಿಗಿಂತ ಮುಂಚಿತವಾಗಿಯೇ ನಾನು ಸ್ವರ್ಗವನ್ನು ಸೇರಿ ಪಂಚಾರತೀ ಸಮೇತ ಸ್ವರ್ಗದ್ವಾರದಲ್ಲಿದ್ದುಕೊಂಡು ಅವರ ಬರವನ್ನೇ ಇದಿರು ನೋಡುತ್ತಿರುವುದೇ ನನಗೆ ಲೇಸು; ಆದರೆ, ಪ್ರಿಯಂವದೇ, ನನ್ನ ಮುದ್ದು ರಾಹುಲನಿಗೆ ಯಾರು ಗತಿ?'' ಹೀಗೆಂದು ವ್ಯಸನಾಕ್ರಾಂತೆಯಾಗಿ ಕೈಯಲ್ಲಿ ತಲೆಯನ್ನಿರಿಸಿ ಕೂತಳು. ಅಷ್ಟರಲ್ಲೇ, "ಯಶೋಧರೆ, ಇದೆಂತಹ ಮೌಢ್ಯ!'' ಹೀಗೆಂದು ಹತ್ತಿರಲೇ ನಿಬಿಡವಾಗಿದ್ದ ಲತಾಕುಂಜದ ಮಧ್ಯದಿಂದ ಯಾರೋ ಮಾತಾಡಿದಂತಾಯಿತು. ಯಶೋಧರೆಗೆ ಈ ಇಂಪಾದ ಧ್ವನಿಯ ಪರಿಚಯವಾಯಿತು; ಆಕೆಯ ಮುಖ ಭಾವವು ದಿಗಿಲುಬಿದ್ದು ಬದಲಾದುದು. ಅಶರೀರವಾಣಿಯಾದ ಲತಾ ಸಮೂಹದ ಕಡೆಗೆ ಫಕ್ಕನೇ ಓಡಿ ಹೋದಳು, ಆದರೆ

ಅಲ್ಲೇನೂ ಆಕೆಗೆ ಗೋಚರವಾಗಲಿಲ್ಲ. "ಯಶೋಧರೇ! ಆತ್ಮಹತ್ಯವೇ ಅಲ್ಲ, ಅದಕ್ಕಿಂತ ಶತಾಧಿಕವಾಗಿ ಘೋರವಾದ ಅಕೃತ್ಯವನ್ನು ಆಚರಿಸಿದರೂ ಸಿದ್ಧಾರ್ಥನು ನಿನಗೆ ಲಭಿಸ್ಯಾನು ಎಂಬ ಆಸೆಯನ್ನು ಬಿಟ್ಟುಬಿಡು.'' ಪುನಃ ಅದೇ ಸ್ವರವು ಕೇಳಬಂದಿತು. "ನನ್ನ ಮೇಲೆ ನಿನಗಿರುವ ನಿಸ್ಸೀಮ ಪ್ರೇಮವನ್ನು ನೋಡಿ ಸಂತೋಷಭರಿತನಾದೆನು, ಆದರೆ ಸಿದ್ಧಾರ್ಥನು ಸ್ವಾರ್ಥಪರನಲ್ಲವೆಂದು ಒಳ್ಳೇ ಜ್ಞಾಪಕದಲ್ಲಿರಲಿ. ಸರ್ವ ಪ್ರಾಣಿವರ್ಗವನ್ನೂ ಅರುಮೆಯಿಂದ ಕಂಡು ಜಗಕ್ಕೆ ದಯಾಳುವಾಗಿರುವುದಕ್ಕೆ ಪ್ರಯತ್ನಪಡು; ಪರೋಪಕಾರದ ದೀಕ್ಷೆಯನ್ನು ಸ್ವೀಕರಿಸು; ಯಾತನೆಗಳಿಗೊಳಪಟ್ಟವರನ್ನು ಸುಖಿಗಳಾಗಿ ಮಾರ್ಪಡಿಸುವ ಶ್ರದ್ಧೆಯಿಂದುಳಿ. ಇದರಂತೆ ಪ್ರವರ್ತಿಸಲು ಅಲ್ಪಕಾಲದೊಳಗೆ ನಿನಗೆ ಸಿದ್ಧಾರ್ಥನು ದೊರಕುವನು; ಹೊರತು, ಅನ್ಯೋಪಾಯಗಳಿಂದ ಆತನ ನೆಳಲಾದರೂ ನಿನಗೆ ಲಭಿಸಲಸಾಧ್ಯವೆಂದೇ ತಿಳಿ. ಯಶೋಧರೆಯೇ, ಈಗ ನಡೆ. ಅರಮನೆಗೆ ಹೋಗಿ ನಿಶ್ಚಲಭಾವದಿಂದ ನಾನು ಸೂಚಿಸಿದ ವ್ರತವನ್ನಾಚರಿಸು; ಅಂದರೆ ನೀನೀಗ ಬಯಸುತ್ತಿರುವ ಸಿಧ್ಧಾರ್ಥನ ಪುರುಸಮಾಗಮವು ನಿನಗೆ ಪ್ರಾಪ್ತವಾಯಿತೆಂದರಿ. ನನ್ನ ವಚನಗಳಲ್ಲಿ ನಿನ್ನ ವಿಶ್ವಾಸವಿರಲಿ! ಹೋಗು! ಶ್ರೀ ಪರಮೇಶ್ವರನು ನಿನಗೆ ನಿತ್ಯ ಕಲ್ಯಾಣವನ್ನೀಯಲಿ!!'' ಈ ಸ್ವರ್ಗೀಯಾಲಾಪವು ಮೆಲ್ಲಮೆಲ್ಲನೆ ಶಾಂತತೆಯ ಸಾಮ್ರಾಜ್ಯದಲ್ಲಿ ವ್ಯಾಪಿಸಿತು. ಯಶೋಧರೆಯ ಚಿತ್ತಸ್ಖಲಿತ ಮಾಡಿದ ಈ ಸದ್ದು ಅಡಗಿ ಹೋಯಿತು; ಆದರೆ ಅದು ಸಂಪೂರ್ಣ ನಷ್ಟಪ್ರಾಯವಾಗಲಿಲ್ಲ. ಅದೇ ಶಬ್ದವು ಈಗ ಯಶೋಧರೆಯ ಹೃದಯ ಕಮಲದಲ್ಲಿ ಚಲಿಸುತ್ತಿದ್ದಿತು. ಕೊಂಚ ಸಮಯಾನಂತರ ದೂತಿಯು ಸೂಚಿಸಿದ ಮೇರೆಗೆ, ವ್ಯಸ್ತಚಿತ್ತೆಯಾಗಿ ಯಶೋಧರೆಯು ಪ್ರಾಸಾದಾಭಿಮುಖವಾಗಿ ಹೊರಟಳು. ಈ ವೇಳೆ ತಾರಾಗಣ ಪರಿವೃತನಾದ ರಜನೀನಾಥನು ಸಿದ್ಧಾರ್ಥನ ಪುನರ್ಸಂಪರ್ಕವು ಫಲಿಸುವದೆಂದು ಯಶೋಧರೆಗೆ ಧೈರ್ಯ ಹೇಳುತ್ತಿದ್ದನೋ ಎಂಬಂತೆ ಪ್ರಭಾಯಮಾನವಾಗಿ ರಂಜಿಸುತ್ತಿದ್ದನು.

Digitized by ROJA MUTHIAH RESEARCH LIBRARY



ದಾರಿಯ ಇಬ್ಬದಿಗಳಲ್ಲಿಯೂ ನಿಬಿಡವಾಗಿದ್ದ ವೃಕ್ಷಗಣಂಗಳು ಸಿದ್ಧಾರ್ಥನ ವಾಗ್ದಾನದಲ್ಲಿ ನಿಶ್ಚಲವಾದ ನಂಬುಗೆಯನ್ನಿಡೆಂದು ಬೋಧಿಸುವಂತೆ ತಮ್ಮ ಸೋಗೆಗಳನ್ನಲ್ಲಾಡಿ ಅಡಿಗಡಿಗೆ ಸೂಚಿಸುತ್ತಿದ್ದವು.

ಬರುತ್ತಾ ಬರುತ್ತಾ ಯಶೋಧರೆಯು ಸ್ವಾಭಾವಿಕವಾಗಿ ಪಕ್ಕಕ್ಕೆ ನೋಡಿದಳು; ತಕ್ಷಣವೇ, ಆಕೆಯ ಅಂಗಾಂಗಗಳಿಂದ ಬೆವರಿಳಿಯಿತು; ಆಕೆಯ ಎದೆಗೆ ಶೂಲನಟ್ಟಂತಾಯಿತು. ಕೌಪೀನವನ್ನುಟ್ಟು ಕಮಂಡಲಧಾರಿಯಾದ ಒಬ್ಬ ದಿವ್ಯವ್ಯಕ್ತಿಯು ದಢದಢನೆ ಹೆಜ್ಜೆಯನ್ನಿಕ್ಕುತ್ತಾ ದಟ್ಟಗಾದ ಪೊದೆಯ ಮಧ್ಯದಲ್ಲಿ ಆಕೆಯ ದೃಷ್ಟಿಯ ಮುಂದಿನಿಂದ ನಡೆದು ಅದೃಶ್ಯವಾದನು.

ದಿವಸ ಹೋಯಿತು, ತಿಂಗಳು ಕಳೆಯಿತು, ವರ್ಷದಾಟಿತು, ಆದರೂ ಸಿದ್ಧಾರ್ಥನ ವಚನದ ಮೇಲೆ ವಿಶ್ವಾಸವಿಟ್ಟು ಆಶಾಪೀಡಿತಳಾದ ಯಶೋಧರೆಯು ದಾನಧರ್ಮದಲ್ಲಿಯೂ ಪುರಾಣಶ್ರವಣೆಯಲ್ಲಿಯೂ ಇತರ ಪುಣ್ಯಾರ್ಜನೆಯ ಕಾರ್ಯಗಳಲ್ಲಿಯೂ ಉದ್ಯುಕ್ತಳಾಗಿ ಕಾಲಹರಣವಂ ಮಾಡುತ್ತಿರಲು, ಆಕೆಯ ನುಡಿನಡೆಗಳು ನಿಜವಾಗಿಯೂ,

"ಗುರ್ವಪಿ ವಿರಹದುಃಖಮಾಶಾಬನ್ಧಃ ಸಾಹಯತಿ''

ಎಂಬ ಹಿರಿಯರ ವಚನವನ್ನು ಸರಿಗೊಳಿಸುತ್ತಿದ್ದುವು. ಯಶೋಧರೆಯು ಇತರ ಆರ್ಯ ಸ್ತ್ರೀಯರಂತೆಯೇ ಮಹಾಪತಿವ್ರತೆಯಾಗಿದ್ದಳು. ಪತಿಯಾಜ್ಞೆಯನ್ನು ಶಿರಸಾವಹಿಸಿ ತದನುಸಾರ ಅನುವರ್ತಿಸುವುದೇ ಪತ್ನಿಗೆ ಮುಖ್ಯ ಕರ್ತವ್ಯವೆಂದರಿತು, ಆ ತನ್ನ ಕರ್ತವ್ಯವನ್ನು ಉತ್ಕೃಷ್ಟ ದಕ್ಷತೆಯಿಂದ ನಿರ್ವಹಿಸುತ್ತಿದ್ದಳು. ಈಚೀಚೆಗೆ ಯಶೋಧರೆಯ ಕೈಯಿಂದ ಸಾಕಷ್ಟು ದಾನಧರ್ಮವೂ ಸಾಂಗವಾಗಿ ನಡೆಯುತ್ತಿತ್ತು; ಕಪಿಲವಸ್ತು ನಗರದ ಪ್ರತಿಯೊಬ್ಬ ಬಡವನೂ ದಿನಂಪ್ರತಿಯೂ ತಪ್ಪದೆ ಕುಮಾರಿ ಯಶೋಧರೆಯ ಹಸ್ತದಿಂದ ಏನಾದರೂ ಸಿಕ್ಕುವದೆಂಬ ನಿರೀಕ್ಷಣೆಯಿಂದಿರುವನು. ಸಾಧ್ವೀಮಣಿಯಾದ ಯಶೋಧರೆಯು ದಾನಶೂರಳೆಂಬ ಕೀರ್ತಿಯು ಚತುರ್ದಿಕ್ಕುಗಳಲ್ಲಿಯೂ ಜನಜನಿತವಾಯಿತು; ಆಕೆಯ ಹೆಸರನ್ನು ಕೇಳಿದವರೆಲ್ಲಾ

O,33,3 SRI S N23

ಆಕೆಯ ಅಭೀಷ್ಟವನ್ನೇ ಉತ್ಸಾಹಪೂರ್ವಕವಾಗಿ ಯಥಾರ್ಥದಿಂದ ಚಿಂತಿಸುತ್ತಿದ್ದರು.

ಯಶೋಧರೆಯು ನಿತ್ಯ ದೇವದರ್ಶನಕ್ಕೆ ಸಮಯವನ್ನು ನಿಯಮಿಸಿಯೇ ಇಟ್ಟಿದ್ದಳು. ಮುಂಜಾನೆ, ಮಧ್ಯಾಹ್ನ, ರಾತ್ರಿ— ನಿದ್ದೆ ಹೋಗುವುದರ ಮುಂಚಿತವಾಗಿ— ಹೀಗೆ ನಿತ್ಯವೂ ಮೂರು ಬಾರಿ ಪರಮೇಶ್ವರನ ಧ್ಯಾನದಲ್ಲಿ ಬಹುತೇಕ ಕಾಲವ್ಯಯಮಾಡುತ್ತಿದ್ದಳು. ಬೆಳಿಗ್ಗೆಯೂ ಮಧ್ಯಾಹ್ನಕ್ಕೂ ಈ ನಿಷ್ಠೆಯು ಮಹಲಿನಿಂದ ಸ್ವಲ್ಪ ದೂರವಿರುವ ಒಂದು ದೇವಿಯ ಗುಡಿಯಲ್ಲಾಗುತ್ತಿತ್ತು, ಮತ್ತು ಅಲ್ಲಿಂದ ಪ್ರಾಣಕ್ಕಿಂತಧಿಕ ಜೋಪಾಸನೆಯಿಂದ ತೀರ್ಥವನ್ನೊಯ್ದು ಅರಮನೆಯ ಶಿವಲಿಂಗಕ್ಕೆ ದಿನಂಪ್ರತಿಯೂ ಅರ್ಪಿಸುತ್ತಿದ್ದಳು. ಈ ಕಟ್ಟಳೆಗನುಸಾರವಾಗಿ ಒಂದು ದಿನ ಯಶೋಧರೆಯು ತನ್ನ ದಾಸಿಯನ್ನೊಡಗೂಡಿ ದೇವಸ್ಥಾನದಿಂದ ಅರಮನೆಯ ಕಡೆಗೆ ಬರುತ್ತಿದ್ದಳು. ತರಣಿಯು ಮಧ್ಯಭಾಗಕ್ಕೆ ತಲಪಿದ್ದುದರಿಂದ ಬಿಸಿಲಿನ ತಾಪವು ಅಧಿಕ ಜ್ವಾಲೆಯನ್ನು ಗುಳುತ್ತಿದ್ದಿತು. ವಿಶಾಲವಾದ ಅಂತರಿಕ್ಷದಲ್ಲಿ ಪಕ್ಷಿಗಳು ಮಾತ್ರವಲ್ಲಾ ಕ್ರಿಮಿಕೀಟಾದಿಗಳ ಸಂಚಾರಕ್ಕೂ ಅನಾಸ್ಪದವಾಗಿದ್ದಿತು. ಇಂಥಾ ಸಮಯದಲ್ಲಿ ಮಾರ್ಗದ ಪಕ್ಕದಲ್ಲಿ ಕಲ್ಲಿನ ರಾಶಿಯ ಮೇಲೆ ಬೆಂಡಾಗಿ ಮುಗ್ಗುರಿಸಿ ಬಿದ್ದಿದ್ದೊಬ್ಬ ಮುದುಕನ ಅನಪೇಕ್ಷಿತವಾದ ದೀನವಾಣಿಯು ಯಶೋಧರೆಗೆ ಕೇಳಬಂದು ಆಕೆಯು ಘಾಬರಿಯಾದಳು; ಆಕೆಯ ಹೃತ್ಕಮಲವು ಕಂಪಿಸಿದಂತಾಯಿತು; ತಕ್ಷಣವೇ ಮುದುಕನ ಬಳಿಗೆ ಹೋದಳು; ಕೃಪಾದೃಷ್ಟಿಯಿಂದ "ಅಯ್ಯೋ, ಬಡ ಮುದುಕನೇ, ನಿನಗೇನಾಯಿತು?'' ಎಂದು ಎರಡೆರಡು ಬಾರಿ ವಿಚಾರಿಸದಳು. ಮುದುಕನು ಅತಿ ಪ್ರಯಾಸದಿಂದ ತನ್ನ ಕೈಯನ್ನೆತ್ತಿ ಕುಗ್ಗಿದ ಕಂಠದಿಂದ, "ಅಮ್ಮಾ, ನೀ....ರು....ನೀರು....ರು" ಎಂದು ತನ್ನ ಸಂಕಟವನ್ನು ವ್ಯಕ್ತಪಡಿಸಿದನು; ಯಾವದಾದರೊಂದು ವಸ್ತುವು ಪ್ರಾಯಶಃ ಲಭಿಸುವದೆಂಬಾಸೆಯು ಉಕ್ಕುತ್ತಾ ಬಂದರೆ ದೇಹದಲ್ಲಿ ಸಂಕಟವು, ಎಣಿಸಿದ ವಸ್ತುವು ದೊರೆಯುವ ತನಕ, ಅಧಿಕಾಧಿಕವಾ



ಗುವುದು ಸಹಜವಷ್ಟೆ. ಅರ್ಥಾತ್ ಮುದುಕನ ದಾರಿದ್ರಸೂಚಕವಾದ ಮುಖಭಾವವನ್ನೂ ಆತನ ಕಣ್ಣುಗಳಿಂದ ಹರಿಯುತ್ತಿದ್ದ ಅಶ್ರುಧಾರೆಯನ್ನೂ ಆತನು ನರಳುವುದನ್ನೂ ನೋಡಿ ಯಶೋಧರೆಯ ಅಂತಃಕರಣವು ಕರಗಿ ನೀರಾದುದು. ಸ್ವಲ್ಪ ಹಿಂದಕ್ಕೆ ಸರಿದು "ನಿಲ್ಲು, ನಿಲ್ಲು, ಪ್ರಿಯಂವದೇ, ಈಚೆ ಕಡೆಯಿರುವ ಬಾವಿಯಿಂದ ಕೊಂಚ ನೀರು ತಾ, ನಡೆ, ಓಡು, ಓಡು, ಶೀಘ್ರ, ಎಂದು ಅವಸರದಿಂದ ಆಜ್ಞಾಪಿಸಿದಳು. ಇದನ್ನು ಕೇಳಿದ ಪ್ರಿಯಂವದೆಯು ಚಕಿತಳಾಗಿ ತಡವರಿಸಿ ಕೊನೆಗೆ ಬಾವಿಯನ್ನು ಕುರಿತು ನಡೆದಳು. ಸ್ವಾಭಾವಿಕವಾಗಿಯೇ ಪ್ರಿಯಂವದೆಯು ಗಜಗಾಮಿನಿಯೆನ್ನಬಹುದು; ಈಗಲಾದರೋ ಗಾಬರಿಯಿಂದ ಮತ್ತಷ್ಟು ಜಡಚಾರಿಯಾದಳು. ಆದ್ದರಿಂದ ನೀರು ತರಲಿಕ್ಕೆ ಹೆಚ್ಚು ಹೊತ್ತಾಗಿತು. ತರುವಾಯ ಒಂದು ನೀರಿನ ಕೊಡ ಸಮೇತಳಾಗಿ ವೃದ್ಧನ ಬಳಿಗೈತಂದಳು; ಆದರೆ ಆ ಮುದುಕನ ಅದೃಷ್ಟವು ಬಹು ವಿಕೃತವಾಗಿದ್ದಿತು. ಆ ನೀರು ತನ್ನ ಬಾಯಿಯಲ್ಲಿ ಬೀಳುವಷ್ಟು ಆತನು ಪುಣ್ಯಶಾಲಿಯಾಗಿರಲಿಲ್ಲ. ಕೊಡವನ್ನು ಕೈಗಳೆರಡರಿಂದಲೂ ಬಿಗಿಯಾಗಿ ಹಿಡಕೊಂಡು ಜಾಗರೂಕತೆಯಿಂದ ಹೆಜ್ಜೆಯನಿಕ್ಕುತ್ತಾ ಪ್ರಿಯಂವದೆಯು ಬರುತ್ತಿರಲು ಸಂಕೇತ ಸ್ಥಾನಕ್ಕೆ ನಾಲ್ಕೈದು ಮಾರುದ್ದವಿರುವಾಗ ಫಕ್ಕನೇ ಕಾಲುಜಾರಿ ಬಿದ್ದುಬಿಟ್ಟಳು; ಆಕೆಯ ಕೈಯಲ್ಲಿದ್ದ ನೀರಿನ ಪಾತ್ರವೂ ಕವಚಿ ನೆಲಕ್ಕೆ ಬಿದ್ದುದು. ಅಷ್ಟು ಶ್ರಮದಿಂದ ತಂದ ನೀರೂ ಭೂಮಿಯ ಪಾಲಾದುದು.

"ಅಯ್ಯೊಯ್ಯೋ, ಬಿತ್ತು! ಬಿತ್ತು!'' ಯಶೋಧರೆಯು ನಿಂತಲ್ಲಿಂದಲೇ ಕಳವಳಪಟ್ಟು ಗದರಿಸಿದಂತೆ ನಟಿಸಿದಳು. ತಿರಿಗಿ ಉಚ್ಚಸ್ವರದಿಂದ "ಪ್ರಿಯಂವದೇ! ನಿನ್ನ ಶ್ರಮಕ್ಕೆ ತಕ್ಕ ಪ್ರತಿಫಲವು ಸಾವಧಾನದಿಂದ ನಿನಗಾಗುವುದು; ಬೇಸರಿಸಬೇಡ. ಆದರೆ ಯಾವ ಬಗೆಯಿಂದಾದರೂ ಇನ್ನೊಮ್ಮೆ ನೀರು ತರಲೇ ತಕ್ಕುದು; ವೃದ್ಧನ ಬಾಯಿಗೆ ನಾಲ್ಕು ಗುಟುಕು ನೀರು ಹೊಯ್ದು ಆತನನ್ನು ಬದುಕಿಸಲೇ ಸಿದ್ಧವು'' ಎಂದಳು.

Digitized by ROJA MUTHIAH RESEARCH LIBRARY

ಪ್ರಿಯಂವದೆಯು ಸ್ವಲ್ಪ ಸಂಕುಚಿತೆಯಾದಂತೆ ಮಾರ್ಪಟ್ಟು ಮರಳಿ ಹೊರಟಳು.

ಪ್ರಿಯಂವದೆಯು ತೆರಳಿದ ನಂತರ ಯಾರದೇನೋ ಹೆಜ್ಜೆಯ ಸ್ವರವು ಕೇಳಿಸಿದಂತಾಗಿ, ಯಶೋಧರೆಯ ಲಕ್ಷ್ಯವು ಸಹಜ ಹಿಂದಕ್ಕೆ ಚಲಿಸಿತು. ಒಬ್ಬ ನವಯೌವನ ಭರಿತನಾದ ಪ್ರೌಢ ಸನ್ಯಾಸಿಯು ತ್ವರೆಯಿಂದ ತನಗಭಿಮುಖವಾಗಿ ಬರುತ್ತಿರುವುದನ್ನು ಕಂಡಳು. ಆ ಆಕೃತಿಯನ್ನೀಕ್ಷಿಸಿ ಆಕೆಯ ಶರೀರಯಷ್ಟಿಯು ಗಾಳಿಯ ರಭಸದಿಂದ ಅಲುಗಿಸಲ್ಪಟ್ಟ ಕೋಮಲವಾದ ಲತೆಯೋಪಾದಿ ನಡುಗಿತು. ಇಷ್ಟರಲ್ಲಿ ಆ ತರುಣಗೋಸಾವಿಯು ಅಲ್ಲಿಗೆ ತಲಪಿ ಕೂಡಲೇ ಮುದಕನ ಶಿರವನ್ನೆತ್ತಿ ತನ್ನ ತೊಡೆಯಮೇಲಿಟ್ಟುಕೊಂಡು ಕಮಂಡಲೋದಕದಿಂದ ಆ ದರಿದ್ರನಿಗೆ ಶೈತ್ಯೋಪಚಾರಗಳಿಂದ ಆದರಿಸಲಾರಂಭಿಸಿದನು. ಮುದುಕನು ಕ್ರಮೇಣವಾಗಿ ಚೇತರಿಸಿಕೊಂಡಂತೆ ಕಾಣಬಂದಿತು. ಆಗಲಾ ಸನ್ಯಾಸಿಯು ಗಂಭೀರ ಮುದ್ರೆಯಿಂದ "ಯಶೋಧರೇ!" ಎಂದು ಕೂಗಿ ಕರೆದನು.

"ಯಶೋಧರೇ" ಎಂಬ ಶಬ್ದವನ್ನು ಕೇಳುತ್ತಲೇ ಯಶೋಧರೆಯು ವಿಸ್ಮಯಗೊಂಡಳು. ಆಕೆಯ ಮೆದುಳಲ್ಲಿ ಅನೇಕ ವಿಧದ ವಿಚಾರತರಂಗಗಳೇ ಮೊಳಿಸಿದುವು. ಆ ಶ್ರೇಷ್ಟನಾದ ಸನ್ಯಾಸಿಯು ಕೊಂಚ ಮುಂದಕ್ಕೆ ಸರಿದು "ನಿನ್ನಲ್ಲಿರುವ ಈವತ್ತಿನ ತೀರ್ಥದಿಂದ ನಿನ್ನ ದೇವರು ಸಮಾಧಾನಪಡಲಾರನು" ಎಂದನು. ಯಶೋಧರೆಗೆ ಈಗಲಾದರೋ ಅನುಮಾನವೆಲ್ಲಾ ಕಳೆದುಹೋಯಿತು. ತನ್ನ ತಿಳಿಗೇಡಿತನಕ್ಕಾಗಿ ನಾಚಿಕೊಂಡು ನಿರುತ್ತರೆಯಾಗಿ ಆಕೆಯು ತಲೆಬಾಗಿ ಅಂಜಿಕೆಯಿಂದ ನಿಂತಲ್ಲೇ ನಿಂತುಕೊಂಡಳು. ಸಿದ್ಧಾರ್ಥನು ಪುನಃ "ಯಶೋಧರೇ! ಆದೇ ತೀರ್ಥವು ಈ ದಿನ ಇಂಥಾ ಸಂಕಷ್ಟಪಡುತ್ತಿರುವ ಈ ವೃದ್ಧನ–ಈ ಪರಮಾತ್ಮನ–ಉಪಯೋಗಕ್ಕೆ ವಿನಿಯೋಗಿಸಲ್ಪಡುತ್ತಿದ್ದರೆ ಅದರ ಸಾರ್ಥಕವಾಗುತ್ತಿತ್ತು ಮಾತ್ರವಲ್ಲದೆ ಇವನಲ್ಲಿ ಅಡಕವಾಗಿರುವ ಸರ್ವವ್ಯಾಪ್ತಿಯಾಗಿರುವ ಪರಾತ್ಪರ ಮೂರ್ತಿಯ

A 812



ಸ್ವರೂಪಿಯಾದ ಆತ್ಮವು ಸಂತುಷ್ಟಿಯಾಗುತ್ತಿತ್ತು. ಇದೇ ನಿನ್ನ ಪರೋಪಕಾರ ಕರ್ಮದ ಕಲ್ಪನೆಯೇ? ಈ ಸಂಕಲ್ಪದಿಂದಲೇ ಸಿದ್ಧಾರ್ಥನು ಪುನಃ ದೊರಕುವನೆಂಬ ನಿರೀಕ್ಷಣೆಯೇ? ಆಹಾ! ಎಂಥಾ ಮೂಢ ಭಾವನೆ! ಬ್ರಾಹ್ಮಣರಿಗೆ ಇಚ್ಛಾನ್ನಭೋಜನ ಗೈಸಿ ಭೂರಿದಕ್ಷಿಣೆಯಿಂದ ತೃಪ್ತಿಗೊಳಿಸಿದ ಮಾತ್ರಕ್ಕೆ ಪರೋಪಕಾರವೆಂದಾಗಲೀ ಪುಣ್ಯಕರ್ಮವೆಂದಾಗಲೀ ಗ್ರಹಿಸಿದ್ದೀಯೆ? ಇಲ್ಲ, ಇಲ್ಲ, ಯಶೋಧರೇ! ಎಂದಿಗೂ ಹಾಗಲ್ಲ. ಈ ಅಭಿಮತದಿಂದ ನಿನ್ನ ಹೇತುವು ಈಡೇರದು. ದಾನಧರ್ಮ ಮಾಡಿದವರೆಲ್ಲಾ ಪುಣ್ಯಶಾಲಿಗಳಾಗುವುದಿಲ್ಲ; ಅವರು ಬರೇ ಲೌಕಿಕ ಕೀರ್ತಿಯನ್ನು ಗಳಿಸುವರು; ಆದ್ದರಿಂದ ಪ್ರತಿಷ್ಟಾಕಾಮರಾಗದೆ ಸಹಜ ವೃತ್ತಿಯಿಂದ ಗುಪ್ತದಾನಿಗಳಾದವರು ಪುಣ್ಯಶಾಲಿಗಳೆನಿಸುವರು; ಅಂಥವರೇ ಭಗವದನುಗ್ರಹಕ್ಕೆ ಪಾತ್ರರಾಗಿ ಆತನ ಸನ್ಮುಖದಲ್ಲಿ ನಿತ್ಯಸುಖಿಗಳಾಗತಕ್ಕವರು. ಈ ಮುದುಕನ ಸಲುವಾಗಿ ಬಾಹ್ಯದಲ್ಲಿ ಕನಿಕರವನ್ನೂ ಕಳವಳವನ್ನೂ ಪ್ರದರ್ಶಿಸಿದೆ; ಆದರೆ ನಿನ್ನ ಕೈಯಿಂದೇನೂ ಸಾಗಲಿಲ್ಲ. ಬರೇ ಕಳವಳದ ಶಬ್ದಗಳನ್ನು ಉಚ್ಚರಿಸಿದ ಮಾತ್ರಕ್ಕೆ ಪರೋಪಕಾರವಲ್ಲ; ಅದರೊಂದಿಗೆ ಚರ್ಯೆಯೂ ಅವಶ್ಯ; ಆ ಚರ್ಯೆಯು ಕೇವಲ ಅಸ್ವಾರ್ಥತೆಯಿಂದಾಗತಕ್ಕದು. ಈ ಜಗತ್ತಿನಲ್ಲಿ ಡಂಭಾಚಾರಕ್ಕಾಗಿ ಕಳವಳವನ್ನು ಮಾತ್ರ ಪ್ರಕಾಶಗೊಳಿಸುವವರನೇಕರು; ಆದರೆ ಭೂತದಯೆ, ಪರೋಪಕಾರ ಇವುಗಳ ಮರ್ಮವನ್ನು ಅರಿತವರು ವಿರಳರು. ಹಾಗೆಯೇ ನಿನ್ನಾಚರಣೆಯು. ಪ್ರಿಯಂವದೆಯು ದೊಪ್ಪನೆ ನೆಲಕ್ಕೆ ಬಿದ್ದಿರಲು ಪುನಃ ಹೋಗಿ ನೀರುತಾರೆಂದು ಆಜ್ಞಾಪಿಸಿದೆ; ಆಗ್ಗೆ ಆಕೆಗೆ ಎಷ್ಟು ಸಂಕಟವಾಯಿತೋ? ಆಕೆಯನ್ನು ಬಿದ್ದು ನೊಂದವಳೆಂದು ಕುಳ್ಳಿರಿಸಿ ನೀನೇ ಹೋಗುತ್ತಿದ್ದರೆ ಏನು ವಿಪತ್ತೊದಗುತ್ತಿತ್ತು! ಆಕೆಯನ್ನು ಕೇವಲ ದಾಸಿಯೆಂಬ ಜಿಹಾಸೆಯಿಂದ ಭಾವಿಸಿದೆ, ಆದರೆ ಪರೋಪಕಾರದ ಕಾರ್ಯಕ್ಕೆ ಧನಿ ಆಳು, ಹಿರಿಯವನು ಕಿರಿಯವನು, ಶ್ರೇಷ್ಠನು ನೀಚನು ಎಂಬಿತ್ಯಾದಿ ಭೇದಾಭೇದಗಳನ್ನು ಪರಿಗಣಿಸುವುದು ತುಚ್ಛವಾದದ್ದು; ಅಂತಃಕರ

O33Y3 SRI S N23
Digitized by ROJA MUTHIAH RESEARCH LIBRARY

ಅಂತರ್ಯವು ಸುಹೃದಯವೆನ್ನಿಸದು; ಬರೇ ಡಂಭವೆಂಬ ಕಿಚ್ಚಿನಿಂದ ಬೆಂದುರಿವ ಕೊಂಬೆಯು. ಡಾಂಭಿಕಭಕ್ತಿಯಿಂದ ದೇವರು ಒಲಿವನೆಂಬ ಗ್ರಹಿಕೆಯು ಬಹು ಶೋಚನೀಯವಾದದ್ದು" ಹೀಗೆಂದು ಸುಮ್ಮಗಾದನು.

ಯಶೋಧರೆಯಿಂದ ಇನ್ನೇನೂ ಬೋಧನೆ ಕೇಳ ಸಹಿಸಲಿಲ್ಲ. ಧಡಕ್ಕನೆ ಗೋಸಾವಿಯ ಪಾದಕ್ಕಡ್ಡಬಿದ್ದು, ಕಣ್ಣಿನಿಂದ ಕಂಬನಿಗಳನ್ನು ಸುರಿಸಿ, ಸವಿನಯದಿಂದ "ರಾಜಕುವರ! ಇನ್ನು ಮುಂದೆ ತಾವು ಆಜ್ಞಾಪಿಸಿದಂತೆಯೇ ನಡಕೊಳ್ಳುವೆನು. ತಮ್ಮ ಉಪದೇಶಾಮೃತದಿಂದ ನನ್ನ ಮನಸ್ಸು ವಿಕಸಿತವಾಗಿ ನಾನು ಧನ್ಯಳಾದೆನು; ನನಗೆ ಜ್ಞಾನವು ಬಂದುದು. ಈಗಲಾದರೂ ಈ ದಾಸಿಗೆ ಸ್ವಾಮಿಯವರ ಚರಣಸೇವೆಗನುಜ್ಞೆ ದೊರೆಯಲಿ. ನನ್ನನ್ನು ಇನ್ನೆಷ್ಟು ಪರೀಕ್ಷಿಸಲಹುದು?"

"ಛೀ, ಛೀ, ಯಶೋಧರೇ!" ಸಿದ್ಧಾರ್ಥನು ದಿಗ್ಗನೆದ್ದು ನುಡಿಯಲಾರಂಭಿಸಿದನು; "ಅದನ್ನು ಮಾತ್ರ ಇಷ್ಟರಲ್ಲೇ ಬೇಡದಿರು, ಅದು ನನಗೆ ಅಸಮ್ಮತವಾದದ್ದು; ಏಕೆಂದರೆ ನಾನು ಕೈಗೊಂಡಿರುವ ಪ್ರಯಾಸಪುರಸ್ಸರವಾದ ನನ್ನ ಕರ್ತವ್ಯದಲ್ಲಿ ಮಹತ್ವವಾದ ಕಾರ್ಯಾನುಭಾಗವು ಇನ್ನೂ ನೆರವೇರಲಹುದು. ಅದಲ್ಲದೆ ಯಶೋಧರೇ! ನೀನು ನನ್ನೊಂದಿಗೆ ಸಮಭಾಗಿನಿಯಾಗಿ ಮೆರೆಯುವಷ್ಟು ಸಿದ್ಧವಾಗಿಲ್ಲವೆಂದು ನನಗೆ ವ್ಯಸನವಾಗುತ್ತೆ; ಆದರೆ ಮಾಡತಕ್ಕದ್ದೇನು? ಅಂಥಾ ಪ್ರತಿಷ್ಠೆಯು ಒಮ್ಮಿಂದೊಮ್ಮೆಯೇ ಸಾಧಿಸಲಸಾಧ್ಯವು. ಸಿದ್ಧಾರ್ಥನಿಗೆ ಆಶ್ವಾಸನವು ಅವಶ್ಯಕವಿಲ್ಲ, ಕ್ರಿಯೆಯನ್ನು ಬಯಸುತ್ತಾನೆ ಎಂಬುದನ್ನು ನೀನು ಮರತೇ ಬಿಟ್ಟಿರುವೆ. ಇದೋ ನಿನಗೆ ಪದೇಪದೇ ಎಚ್ಚರಿಸುತ್ತಿದ್ದೇನೆ; ಇಷ್ಟನ್ನು ಮಾತ್ರ ಮರೆಯಬೇಡ" ಹೀಗೆಂದುಸುರಿ ಸಿದ್ಧಾರ್ಥನು ವೃದ್ಧನನ್ನು ಬೆನ್ನ ಮೇಲಿರಿಸಿಕೊಂಡು ಅಲ್ಲಿಂದ ಹೊರಟುಹೋದನು. ಆಗಲಾ ಯಶೋಧರೆಯು ಪುತ್ಥಳೀ ಬೊಂಬೆಯಂತೆ ಸ್ತಂಭೀಭೂತಳಾಗಿ ಸಿದ್ಧಾರ್ಥನ ಕೃತ್ಯವನ್ನು ಎವೆಯಿಕ್ಕದೆ ನೋಡುತ್ತಿದ್ದಳು. ಆಕೆಯ ಬಾಯಿಂದ ಒಂದಕ್ಷರವೂ ಹೊರಡದು; ಆಕೆಯ ಗತಿಯೂ ಕುಂಠಿತವಾಯಿತು. ಸರ್ವಾಂಗವೂ

Digitized by ROJA MUTHIAH RESEARCH LIBRARY



ಕಂಪಿಸತೊಡಗಿತು. ಈ ತೆರನಿಂದ ಹೊರಟ ಸಿದ್ಧಾರ್ಥನ ನೆರಳು ಮಾಜುವ ತನಕ ನಿಂತಲ್ಲೇ ನಿಂತು ರೆಪ್ಪೆಹಾಕದೆ ನೋಡುತ್ತಿದ್ದು ತನ್ನಾಸೆಯನ್ನು ಪೂರೈಸಿಕೊಂಡಳು. ಅನಂತರ ತನ್ನಿಂದ ತಾನೇ ಧೈರ್ಯವನ್ನವಲಂಬಿಸಿ ಧೃಡಚಿತ್ತೆಯಾಗಿ ಮೆಲ್ಲನೇ ಆರಾಮವನದ ಕಡೆಗೆ ಹೊರಟಳು.

ಈ ದಿನ ನೂತನ ವರ್ಷಾರಂಭ. ಕಪಿಲವಸ್ತು ನಗರದ ಸಕಲ ನಾಗರಿಕರಿಗೆ ಅತ್ಯುತ್ಸಾಹದಾಯಕವಾದ ದಿವಸ. ಹಳೆಯ ಸಂವತ್ಸರವು ತೀರಾ ಆನಂದಮಯವಾಗಿ ಕಳೆದುದರಿಂದ ಈ ಹೊಸ ಸಂವತ್ಸರವೂ ತದೋಪಾದಿ ಸಾಗಬೇಕೆಂಬ ಕುತೂಹಲದಿಂದ ನಗರವಾಸಿಗಳೆಲ್ಲಾ ಸಕಲಾಡಂಬರದಿಂದ ಅಲ್ಲಿಯ ಶ್ರೀಮಾಣಿಕೇಶ್ವರನ ಗುಡಿಗೆ ಪೂಜೆಗಾಗಿ ಹೋಗಿ ಸೇರಿದ್ದರು. ಯಶೋಧರೆಯು ಯಾವದೊಂದು ಮಹೋತ್ಸವಕ್ಕೆ ಹೋಗುವವಳಿದ್ದರೂ ತನ್ನ ದಾಸಿಯಾದ ಪ್ರಿಯಂವದೆಯನ್ನು ಬಿಟ್ಟುಹೋಗುತ್ತಿರಲಿಲ್ಲ; ಅದರಂತೆ ಈ ಹೊತ್ತೂ ಈ ನಿಯಮಕ್ಕೆ ಕೊರತೆ ಬರಲಿಲ್ಲ. ಅರಮನೆಯ ಪರಿಜನವೆಲ್ಲವೂ ಹೊರಟ ನಂತರ ತಾನೂ ದೂತಿಯಿಂದೊಡಗೂಡಿ ಮಾಣಿಕೇಶ್ವರ ಕ್ಷೇತ್ರದ ಜಾತ್ರೆಗೆ ಹೊರಟು ಬಂದಳು. ಬರುತ್ತಾ ಬರುತ್ತಾ ಅರ್ಧಮಾರ್ಗದಲ್ಲಿ ಆಕೆಯ ಮನಸ್ಸಿಗೇನೋ ಒಂದು ವಿಚಾರವು ತಡವರಿಸಿತು. ಕೂಡಲೇ ಆಕೆಯು ಸುತ್ತುಮುತ್ತಲೂ ನೋಡಿ ಎದುರಲ್ಲಿದ್ದ ಹತ್ತಿರದ ದಾರಿಯನ್ನು ಬಿಟ್ಟು ಎಡ ಪಾರ್ಶ್ವದಲ್ಲಿದ್ದ ಕಿಶೋರಬನದ ಕಡೆಗೆ ಸಾರಿದಳು.

"ಅಮ್ಮಾ, ಇದು ಮಾಣಿಕೇಶ್ವರ ಕ್ಷೇತ್ರಕ್ಕೆ ಹೋಗುವ ಹಾದಿಯಲ್ಲ.''

"ಹೌದು, ನನಗೆ ಗೊತ್ತಿದೆ.''

"ಹಾಗಾದರೆ ಈ ದಿನ ಮಾಣಿಕೇಶ್ವರನ ಆಲಯಕ್ಕೆ ಹೋಗುವುದು ನಿಂತಿತೆಂತ ಕಾಣುತ್ತೆ.''

"ನೋಡೋಣ! ನೀನೀಗ ನನ್ನ ಹಿಂದಣಿಂದಲೇ ಬರುತ್ತಿರು.''

ಸ್ವಲ್ಪ ಸಮಯ ಮಾರ್ಗಕ್ರಮಣಮಾಡಿದ ಮೇಲೆ ಯಶೋಧರೆಯು ಸ್ತಬ್ಧತೆಯಂ ಭಂಗಮಾಡಿ ಸಂಕುಚಿತ ಭಾವದಿಂದ, "ಪ್ರಿಯಂವದೇ! ಆ ಸಂಗತಿಯು ನೆನಪಿದೆಯೇ?'' ಎಂದು ಪ್ರಶ್ನಿಸಿದಳು.

"ಯಾವ ಸಮಾಚಾರವಮ್ಮಾ?''

"ಈ ಜಾಗದ್ದಾದರೂ ಜ್ಞಾಪಕವಿದೆಯೇ?''

"ಸರಿ, ಈಗ ನನ್ನ ಪ್ರಜ್ಞೆಗೆ ಬಂದುದು! ಕುಮಾರನನ್ನು ನೀವು ಇಲ್ಲೊಮ್ಮೆ ಕಂಡಿದ್ದಿರಿ; ಆ ವಿಷಯವನ್ನು ತಾನೇ ಕುರಿತು ಮಾತಾಡುತ್ತಿದ್ದೀರಲ್ಲವೇ?''

"ಹೌದೌದು'' ಎಂದುಸುರಿ ಯಶೋಧರೆಯು ನಿಟ್ಟುಸುರು ಬಿಟ್ಟಳು. ಹಾಗೆಯೇ ಬಿಕ್ಕಿಬಿಕ್ಕಿ "ಕುಮಾರನ ಸಂಪರ್ಕವು ನನಗೆ ಪುನಃ ಯಾವಾಗ್ಯೆ ಲಭಿಸುವದೇನೋ ಪರಮೇಶ್ವರನೇ ಬಲ್ಲ; ಆದರೆ ಏನೂ ಆಗಲಿ, ಅವರ ದಿವ್ಯ ವಚನಗಳನ್ನು ಮಹಾಪ್ರಸಾದವೆಂದು ಸ್ವೀಕರಿಸಿರುತ್ತೇನೆ. ಅವುಗಳ ಮೇಲೆಯೇ ನನ್ನ ಹೀರಾ ಭರವಸೆ. ಅವರ ಪವಿತ್ರವಾದ ಚರಣ ಸೇವೆಗೆ ನಾನು ಅಪಾತ್ರೆಯಾಗಿದ್ದರೆ, ಅರ್ಹಳೆಂದು ನನ್ನ ಆಚರಣೆಯಿಂದಲೂ ಮನಸ್ಸಿನಿಂದಲೂ ತೋರ್ಪಡಿಸಿ ನನ್ನ ಕಾಂತನನ್ನು ಮೆಚ್ಚಿಸುವುದೇ ನನ್ನ ಮುಖ್ಯ ಸಾಧನವು'' ಎಂದಳು.

ಮಾತಾಡುತ್ತಾ ಮಾತಾಡುತ್ತಾ ಅವರಿಬ್ಬರೂ ಒಂದು ಬೆಟ್ಟದ ಬುಡದ ಸಮೀಪಕ್ಕೆ ಬಂದು ತಲಪಿದರು. ಯಶೋಧರೆಯು ಸ್ವಲ್ಪ ವಿಶ್ರಮಿಸಿಕೊಳ್ಳಲಿಚ್ಛೈಸಿ ವಿಶಿಷ್ಟವಾದೊಂದು ಶಿಲೆಯ ಮೇಲೆ ಹೋಗಿ ಕುಳಿತಳು. ಆ ಪ್ರಾಂತ್ಯವು ಸ್ವಲ್ಪ ಮಟ್ಟಿಗೆ ಭಯಪ್ರದವಾಗಿ ತೋರುತ್ತಿತ್ತು. ಒಂದು ಪಕ್ಕದಲ್ಲಿ ಲಂಬವಾಗಿಯೂ ಗಾತ್ರವಾಗಿಯೂ ಬೆಳೆದಿರುವ ವೃಕ್ಷಗಳ ಸಾಲಿನಿಂದಲೂ ಇನ್ನೊಂದೆಡೆ ವಾಯುಸಂಚಾರಕ್ಕೂ ಎಡೆಕೊಡಲಾರದಷ್ಟು ನಿಬಿಡವಾದ ಪೊದೆಗಳ ಗುಂಪಿನಿಂದಲೂ ಆವೃತವಾಗಿದ್ದಾ ನಿರ್ಜನ ಪ್ರದೇಶಕ್ಕೆ ಸೂರ್ಯನು ಸಹಾ ಕಣ್ಣೆತ್ತಿ ನೋಡುತ್ತಿರ



ಲಿಲ್ಲವೋ ಎಂಬಂತೆ ಕಾಣುತ್ತಿತ್ತು. ಮುಂದಣ ಭಾಗದಲ್ಲಿರುವ ಕಠ್ರಗಾದ ಬಂಡೆಗಳ ಶ್ರೇಣಿಗಳೂ ಬೆಟ್ಟದಲ್ಲಿ ಅಲ್ಲಲ್ಲಿ ಅಣಕಿ ನೋಡುತಿದ್ದ ನೀಳವಾದ ಕೋಡುಗಲ್ಲುಗಳೂ ನೋಟಕರ ಮನಸ್ಸಿಗೆ ಸಹಜ ಭೀತಿಯನ್ನುತ್ಪನ್ನ ಮಾಡುತ್ತಿದ್ದುವು. ಅರ್ಧಾರ್ಧ ಒಣಗಿ ಬಾಗಿರುವ ಹುಲ್ಲಾದರೋ ಸಂಧ್ಯಾಕಾಲದ ಸಮುದ್ರದ ನೋಟವನ್ನು ಸ್ಮರಣೆಗೆ ತರುತ್ತಿದ್ದಿತು. ಇಷ್ಟರಲ್ಲಿ, "ಅಮ್ಮಾ! ಅಲ್ಲಿ ನೋಡಿರಿ, ಕರಿದಾದ—'' ಎಂದುಸುರಿ ಪ್ರಿಯಂವದೆಯು ಬೆಚ್ಚಿ ಬಿದ್ದು ಯಶೋಧರೆಯ ಕೈಯನ್ನೊತ್ತಿದಳು. ಆಗ್ಗೆ ಆಕೆಯ ಶಬ್ದಗಳು ಬಿಕ್ಕಟ್ಟಾಗಿ ಹೊರಟದುದರಿಂದ ಯಶೋಧರೆಯೂ ಕೊಂಚ ಭಯಗ್ರಸ್ಥಳಾದಳು. ಪ್ರಿಯಂವದೆಯು ನಡನಡುಗಿ ಬೆಟ್ಟದ ಸಂದಿಗೆ ಬೆರಳನ್ನು ಚಾಚಿದಳು; ಆಚೆಗೆ ನೋಡಿದಾಕ್ಷಣವೇ ಯಶೋಧರೆಯ ಮುಖವು ಮ್ಲಾನವಾದುದು; ಆದರೆ ಭಯದ ಚಿಹ್ನೆಯು ಈಷತ್ತಾದರೂ ಕಾಣಲಿಲ್ಲ. ಆ ಪ್ರಸಂಗವು ನಿಸ್ಸಂದೇಹವಾಗಿಯೂ ಭಯಂಕರವಾಗಿದ್ದಿತು. ಒಂದು ಮದ್ದಾನೆಯು ಅತಿ ರಭಸದಿಂದೋಡುತ್ತಾ ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡರು. ಅದರ ಬೆನ್ನಮೇಲೆ ಸುಮಾರು ಏಳೆಂಟು ವರುಷ ಪ್ರಾಯದ ಬಾಲಕನೊಬ್ಬನು ಅಚೇತನವಾಗಿ ಬಿದ್ದಿದ್ದನು. ಆಚೀಚೆ ಓಡ್ಯಾಡಿ ಧೂಳಿನಿಂದ ಆಕಾಶ ಭೂವಲಯಗಳನ್ನೊಂದುಮಾಡಿ ಕೊನೆಗೆ ಒಂದು ಎತ್ತರವಾದ ಬಂಡೆಯ ಮೇಲಕ್ಕೇರುತ್ತಿರಲು ಆ ಮದಕರಿಯು ಕಾಲಿಟ್ಟದ್ದೊಂದು ಬಂಡೆಯ ತುಂಡು ಜಾರಿ ಕೆಳಕ್ಕುರುಳಿ ಆನೆಯ ಕಾಲು ತಪ್ಪಿ ಬೀಳಲು ತತ್‍ಕ್ಷಣವೇ ಬೆನ್ನಿನ ಮೇಲಿಂದ ವೈಮರೆತು ಮಲಗಿದ್ದ ಹುಡುಗನನ್ನು ಹಾರಿಸಿದಂತಾಗಿ ಹುಡುಗನು ನೆಲಕ್ಕೆ ಬಿದ್ದುಬಿಟ್ಟನು. ಆನೆಯಾದರೋ ಹೇಗೂ ಬಂಡೆಯಿಂದಾಚೆಗೆ ದಾಟಿಹೋದುದು. ಮತ್ತು ಇಷ್ಟೆತ್ತರದಿಂದ ಹುಡುಗನನ್ನು ನೆಲಕ್ಕೆ ಅಪ್ಪಳಿಸಿದಂತಾದರೂ ಆತನಿಗೆ ಕಿಂಚಿತ್ತಾದರೂ ನೋವಾಗಲಿಲ್ಲ. ಇದೇತರಿಂದ? ರಾಕ್ಷಸನಾದ ಹಿರಣ್ಯಕಶಿಪುವು ತನ್ನ ವೈರಿಯಾದ ಶ್ರೀಮನ್ನಾರಾಯಣನ ನಾಮವನ್ನೇ ಹಟತ್ತಾಗಿ ಪದೇ ಪದೇ ಉಚ್ಚರಿಸಿದನೆಂದು ತನ್ನೊಬ್ಬನೇ ಮಗನಾದ ಪ್ರಹ್ಲಾದನನ್ನು ಬೆಟ್ಟದಿಂದುರುಳಿಸಲು ಆತನಿಗೇನೂ ಯಾತನೆಯಾಗಲಿಲ್ಲವೆಂಬ ಸೌಮ್ಯಕ್ಕೆ ಸರಿಯಾಯಿತೇ?

Digitized by ROJA MUTHIAH RESEARCH LIBRARY

ತಕ್ಕ ಮಟ್ಟಿಗೆ ಹೌದೆನ್ನಬಹುದು; ಏಕೆಂದರೆ, ಸುದೈವದಿಂದ ಹುಡುಗನು ಬಿದ್ದ ಸ್ಥಳದಲ್ಲಿ ಕಲ್ಲುಮುಳ್ಳುಗಳಿಲ್ಲದೆ ಬದಲಾಗಿ ನುಣುಪಾದ ಹುಲ್ಲು ಮಾತ್ರ ದಟ್ಟಗಾಗಿ ಬೆಳೆದಿತ್ತು. ಆ ಸಹಾಯರಹಿತನಾದ ಬಾಲಕನು ಬಿದ್ದುದನ್ನು ನೋಡಿದಾಕ್ಷಣವೇ ಸ್ವವಿಚಾರವನ್ನು ಮಾಡದೆ ಕೇವಲ ಪರೋಪಕಾರದ ಬುದ್ಧಿಯಿಂದ ಯಶೋಧರೆಯು ಆ ಮಗುವಿನ ಬಳಿಗೆ ಓಡಹತ್ತಿದಳು. ಸಮೀಪದಲ್ಲೆಲ್ಲೂ ಆನೆಯು ಇಲ್ಲವೆಂದು ನಿರ್ಧರಿಸಿಕೊಂಡು ಪ್ರಿಯಂವದೆಯೂ ಆಕೆಯ ಹಿಂದುಗಡೆಯಿಂದಲೇ ಗಜಗತಿಯಿಂದ ನಡೆದಳು.

ಅಲ್ಲಿಗೆ ಹೋಗಿನೋಡುವದೇನು! ಯಶೋಧರೆಯ ಬಾಯಿಯ ನೀರು ಆರಿ ಹೋಯಿತು. ಯಾವ ಸಂಕಷ್ಟವಾದರೂ ಒಂದೊಂದೇ ಒದಗುವುದಿಲ್ಲ; ಎಲ್ಲವೂ ಒಂದೇ ಬಾರಿ ಬಂದು ಬಾಧಿಸುವುದೆಂಬದು ಎಲ್ಲರಿಗೂ ತಿಳಿದಿದ್ದ ಸಂಗತಿಯಷ್ಟೇ! ಮೊದಲೇ ಯಶೋಧರೆಗೆ ಪತಿವಿಯೋಗದ ದುಃಖ; ಅದೂ ಸಾಲದುದಕ್ಕೆ ಇದೋ ಇನ್ನೊಂದು ಘೋರವಾದ ತಾಪತ್ರಯ! ಆನೆಯ ಬೆನ್ನಮೇಲಿಂದ ಬಿದ್ದ ಮಗುವನ್ನು ನೋಡಿ ಈ ದಿನ ತನಗೆ ಸವಿಯಾದ ಕೊಳ್ಳೆಯು ದೊರೆಯಿತೆಂದೆಣಿಸಿಕೊಂಡು ಸಂತೋಷದಿಂದ ಅತ್ಯಾಸೆಯೊಡನೆ ಒಂದು ಗಾತ್ರವಾದ ಹೆಬ್ಬಾವು ಮಂದಗತಿಯಿಂದ ಹರಿದಾಡುತ್ತಾ ಸಮೀಪಿಸುತ್ತಿದ್ದಿತು. ಇದೆಂಥಾ ಭಯಂಕರ ಸಂಧಿ! ಹೆಬ್ಬಾವನ್ನು ಹಿಂದೋಡಿಸಿ ಮಗುವನ್ನೆತ್ತಿಕೊಳ್ಳಬಹುದೆಂಬ ಹೇತುವು ಅಸಂಭವನೀಯವಾಗಿದ್ದಿತು. ಮಗುವಾಗಲೀ ಯಶೋಧರೆಯಾಗಲೀ ಇಬ್ಬರಲ್ಲಿ ಯಾರೊಬ್ಬನಾದರೂ ಆ ಉರಗದ ಬಾಯಿಗೆ ತುತ್ತಾಗಲೇ ಸಿದ್ಧವು. ಯಶೋಧರೆಯ ಮಸ್ತಕವು ಭ್ರಮಿಸತೊಡಗಿತು. ಇಷ್ಟರಲ್ಲಿ ಎರಡು ವರುಷಕ್ಕೆ ಮೊದಲು ತದ್ಪ್ರಾಂತ್ಯದಲ್ಲಿ ಸಂಭವಿಸಿದ್ದ ಸಂಗತಿಯು ಆಕೆಯ ಜ್ಞಾಪಕಕ್ಕೆ ಬಂದುದು; ಆಕೆಗೆ ಸ್ಫುರಣವಾಯಿತು. ಸಿದ್ಧಾರ್ಥನು ಬೋಧಿಸಿದ್ದ ಪರೋಪಕಾರದ ಪ್ರಭಾವವು ಆಕೆಯ ಮೆದುಳಲ್ಲಿ ಶೇರಿಕೊಂಡಿತು. ತಕ್ಷಣವೇ ಆಕೆಯ ಪ್ರತ್ಯೇಕ ನಾಡಿಯಿಂದಲೂ ಅತ್ಯೋಷ್ಣವಾದ ಶೋಣಿತಧಾರೆಯು ಬಲವತ್ತಾಗಿ ಮೆದುಳಿನ ತನಕವೂ ಪ್ರವಾಹಿಸ



ಲಾರಂಭಿಸಿತು. ಆಕೆಯ ಆತ್ಮನು ಎಚ್ಚರವಾದಂತೆ ಭಾಸವಾದುದು. "ಇಲ್ಲೀಗ ಸೋತು ಹೋಗುವದೆಂದರೆ ಹೇಡಿತನವು; ಗೆಲ್ಲಲೇ ಲೇಸು.'' ಹೀಗೆಂದು ಪ್ರತಿಜ್ಞಾಪೂರ್ವಕವಾಗಿ ನಿರ್ಧರಿಸಿಕೊಂಡು ಆಕೆಯು ನಸುನಕ್ಕಳು; ಒಡನೆಯೇ ತನ್ನ ವೀರಾವೇಶವನ್ನು ನೆನನೆನದು ಸ್ವಲ್ಪ ಘಟ್ಟಿಯಾಗಿ ನಕ್ಕಳು; ತುಷ್ಕವಾದ ತರುಗಳಿಂದ ಹೊರಡುವ ಸಳಪಳ ಸದ್ದಿನೊಡನೆ ಆಕೆಯ ನಗೆಯ ಧ್ವನಿಯೂ ಮಿಳಿತವಾದುದು. ಅಂತರಂಗದಲ್ಲಿ ಪತೀಶ್ವರನಾದ ಸಿದ್ಧಾರ್ಥನನ್ನು ಸ್ಮರಿಸಿ ಪ್ರಣಾಮವಂಗೈದು ತಟ್ಟನೆ ಆ ಮಗುವನ್ನೆತ್ತಿ ಪ್ರಿಯಂವದೆಯ ವಶಕ್ಕಿತ್ತಳು. "ಪ್ರಿಯಂವದೇ! ಓಡು, ಓಡು, ದೂರ ಓಡು" ಹೀಗೆಂದು ನುಡಿದು ಮಗು ಬಿದ್ದಿದ್ದ ಸ್ಥಾನದಲ್ಲಿ ತಾನು ಮಲಗಿಬಿಟ್ಟಳು. ಆ ಭಯಂಕರವಾದ ಅನಾಹುತದ ಪರಿಣಾಮಾರ್ಥವು ಕೈಮೀರುತ್ತಿದ್ದರೆ ಯಶೋಧರೆಯ ಪವಿತ್ರಾತ್ಮನು ಪರಲೋಕಕ್ಕೆ ಆಗಲೇ ಪಯಣವಾಗುವದಿತ್ತು. ಆಕೆಯ ಕೋಮಲವಾದ ಶರೀರವು ಭಿನ್ನಭಿನ್ನವಾಗಿ ಒಂದಾನೊಂದು ಕ್ರೂರ ಜಂತುವಿನ ಹೊಟ್ಟೆಯಪಾಲಾಗುತ್ತಿತ್ತು; ಅವಳು ಕಂಡ ಸುಖ ಸ್ವಪ್ನದ ಫಲವೂ ಬೇರೆಯಾಗುತಿತ್ತು; ಸಮರ್ಥನೂ ಪವಿತ್ರನೂ ಆದ ಸಿದ್ಧಾರ್ಥನ ದಿವ್ಯ ವಾಕ್ಕಿನಲ್ಲಿ ಅಭಾವವೂ ಗೋಚರವಾಗುತ್ತಿತ್ತು. ಆದರೆ ಈಶ್ವರನ ಸಂಕೇತವು ಹಾಗಿರಲಿಲ್ಲ. ಕಣ್ಣುಗಳಂ ಮುಚ್ಚಿಕೊಂಡು ಮರಣದ ಹಾದಿಯನ್ನೇ ನೋಡುತ್ತಿರುವ ಸಮಯದಲ್ಲಿ ಯಶೋಧರೆಗೆ ಫಕ್ಕನೆ ಒಂದು ಮಂಜುಳವಾದ ವಾಣಿಯು ನಿನದಿತವಾದುದು. "ಶಾಬಾಸ್, ಯಶೋಧರೆ! ಶಾಬಾಸ್! ಈ ಹೊತ್ತು ನೀನು ನನ್ನನ್ನೂ ನಿನ್ನನ್ನೂ ಅದರಂತೆ ಸರ್ವಜಗತ್ತನ್ನೂ ಕೃತಾರ್ಥರನ್ನಾಗಿ ಮಾಡಿದೆ! ನಿಜವಾಗಿಯೂ ಪಾವನರನ್ನಾಗಿ ಮಾಡಿದೆ! ಇನ್ನು ನಿನ್ನ ವೈಭವಕ್ಕೆ ಏನೆಂದು ಹೇಳಲಿ!" ಯಶೋಧರೆಯು ಮೆಲ್ಲನೇ ಕಣ್ಣು ತೆರೆದಳು. ಸಾಯುವ ಕಾಲಕ್ಕೆ ಇದೇನೋ ಒಂದು ತರದ ಬರಿಯ ಊಹನೆ ಎಂದು ಭಾವಿಸಿಕೊಂಡಳು; ಆದರೆ ಸಿದ್ಧಾರ್ಥನ ತೇಜಃಪುಂಜವಾದ ಚಿತ್ರವನ್ನು ಆಮೂಲಾಗ್ರವಾಗಿ ಈಕ್ಷಿಸಿ ನೋಡುತ್ತಲೇ ಆಕೆಯ ಸಂಶಯುವಳಿದು,

Digitized by ROJA MUTHIAH RESEARCH LIBRARY

ತಾನು ಮಹದಾನಂದಸಾಗರದಲ್ಲಿ ತೇಲುತ್ತಿರುವಂತೆ ಆಕೆಗೆ ಭಾಸವಾದುದು. ಹಾಗೆಯೇ ಆಕೆಯು ಸಿದ್ಧಾರ್ಥನ ಪಾದಗಳ ಮೇಲೆ ಬಿದ್ದು ಹೊರಳಾಡಿದಳು. ಸಿದ್ಧಾರ್ಥನು ಪುನಃ ವೀರಾವೇಶನಾಗಿ "ಯಶೋಧರೇ! ನಿನ್ನೀ ಸ್ವಾರ್ಥತ್ಯಾಗ, ಈ ಪರೋಪಕಾರದಲ್ಲಿ ಉಚ್ಛತಮವಾದ ಧೃಢಸಂಕಲ್ಪ, ನಿನ್ನ ಸತ್ಯನಿಷ್ಠೆ ಇವುಗಳೆಲ್ಲದರ ಫಲವನ್ನು ಪರಮೇಶ್ವರನು ಈ ಹೊತ್ತು ದಯಪಾಲಿಸಿರುವನೆಂದರಿ. ಇದೋ ಪರಾಮರಿಸಿ ನೋಡು—" ಹೀಗೆಂದು ಸಿದ್ಧಾರ್ಥನು ಮೆಲ್ಲಮೆಲ್ಲನೆ ಮಂದಮಾರುತದ ಶೀತಲಸ್ಪರ್ಶದಿಂದ ಚೈತನ್ಯಗೊಳ್ಳುತ್ತಿದ್ದ ಪ್ರಿಯಂವದೆಯ ತೊಡೆಯಮೇಲೊರಗಿದ್ದ ಮಗುವಿನ ಕಡೆಗೆ ಕೈನೀಡಿದನು. ಯಶೋಧರೆಯು ತನ್ನ ಅರ್ಭಕನ ಗುರುತು ಹಿಡಿದಳು. ಆಕೆಯು ಪ್ರಫುಲ್ಲವದನೆಯಾಗಿ ಮಂದಹಾಸದಿಂದ "ಮಗೂ, ರಾಹುಲಾ! ಈ ದಿನ ಏನಾದರೂ ವಿಪರೀತವು ಘಟಿಸುತ್ತಿದ್ದರೆ ನಾನು ಕೇವಲ ಪಾಪಿಣಿಯೆಂದೇ ನಿಂದಾಸ್ಪದಳಾಗಿ ಭೂಮಿಗೆ ಭಾರವಾಗುತ್ತಿದ್ದೆನು; ಕಾಲಗತಿಯಂ ಮೀರಿ ನಡೆಯಲು ಎಂತಹರಿಂದಲೂ ಅಸಾಧ್ಯವು; ಆದರೆ ನನ್ನ ಸುಕೃತ ಫಲದಿಂದಲೇ ಪರಿಣಾಮವು ಇಷ್ಟರಲ್ಲೇ ತೀರಿದುದು." ಹೀಗೆಂದುಸುರಿ ತನ್ನ ಆನಂದಾಶ್ರುಗಳಿಂದ ಮೀಯಿಸಿದಂತೆ ರಾಹುಲನನ್ನು ತೋಯಿಸಿಬಿಟ್ಟಳು. ಮಾತೃಪ್ರೇಮವೇ ಪ್ರೇಮ. ಧಿಟವಾಗಿಯೂ ಅದು ಕಲ್ಪನಾತೀತವಾಗಿದೆ; ಆದ್ದರಿಂದ ಅದನ್ನು ವರ್ಣಿಸಲೆಂತು ಶಕ್ಯ! ಯಶೋಧರೆಯು ಪುನರ್ಜನ್ಮವಿತ್ತ ಬಾಲಕನು ಪರರವನಲ್ಲದೆ ಆಕೆಯು ಗರ್ಭಧರಿಸಿ, ನವಮಾಸಹೊತ್ತು, ಹೆತ್ತು, ಅಕ್ಕರೆಯಿಂದ ಸಲಹಿದ ತನ್ನ ಸ್ವಂತ ಸುಕುಮಾರನು.

ಯಶೋಧರೆಯು ವಿನಹಾ ಅರಮನೆಯಿಂದ ಸರ್ವರೂ ಮಾಣಿಕ್ಯೇಶ್ವರಕ್ಕೆ ಹೋಗಿದ್ದರೆಂದು ಮೊದಲೇ ಹೇಳಿದ್ದೆವಷ್ಟೆ. ಜನರೆಲ್ಲರೂ ಗುಂಪುಗುಂಪಾಗಿ ಮಹಾ ವಿಭೃಂಜನೆಯಿಂದ ಉತ್ಸವವನ್ನು ತೀರಿಸಿ ಹಿಂತಿರುಗಿ ಬರುತ್ತಿದ್ದರು. ಆದರಂತೆಯೇ ರಾಜಕುಮಾರನಾದ ರಾಹುಲನೂ ಅಂಬಾರಿ ಹಾಕಿಕೊಂಡು ಅನುಚರರ ಸಮೇತ ಬರುತ್ತಿದ್ದನು. ಈ ಪ್ರಕಾರ ಉಲ್ಲಾಸದಿಂದ ತಂಡತಂಡವಾಗಿ ಬರುತ್ತಿದ್ದ ಜನಗಳ ಗುಲ್ಲಿಗೆ ಬೆದರಿ ರಾಹುಲನ ಆನೆಯು ಒಮ್ಮೆಯೇ ಗಜರಿ ಮೇರೆತಪ್ಪಿ ಆಚೀಚೆ ಓಡಹತ್ತಿತು. ಆನೆಯನ್ನು ಹಿಡಿಯಬೇಕೆಂದು ಬಗೆದ ಹಲವರ ಯತ್ನಗಳು ನಿಷ್ಫಲವಾದುವು. ಆನೆಯನ್ನು ಸಮಾಧಾನಪಡಿಸಲಿಕ್ಕೋಸ್ಕರವಾಗಿ ಮಾವುತನು ಅದರ ಕಿವಿಯೊಳಕ್ಕೆ ಅಂಕುಶದಿಂದ ತಿವಿದನು; ಆನೆಯು ಸಾಧುವಾಗುವುದರ ಬದಲಾಗಿ ಮಾವುತನಿಗೆ ಮಾತ್ರ ವೈಕುಂಠಯಾತ್ರೆಯೇ ಪ್ರಾಪ್ತಿಸಿತು; ಆನೆಯ ಬೆನ್ನಟ್ಟಿ ಬಂದ ನಾಲ್ಕೈದು ವೀರಚರರೂ ಅದರ ಕಾಲಿನಡಿಗೆ ಬಿದ್ದು ಅದರ ಘಾತದಿಂದ ನಜ್ಜುಗುಜ್ಜಾಗಿ ಮಾವುತನ ಗತಿಯನ್ನೇ ಹೊಂದಿದರು. ಸವಾರರ ಕುದುರೆಗಳೂ ಗಲಭೆಗೆ ಬೆದರಿ ಮುಂದಕ್ಕೆ ಚಲಿಸಲೊಲ್ಲವು. ಕಡೆಗೆ ಎಲ್ಲರನ್ನೂ ಹಿಂದುಳಿಸಿ ಆ ಆನೆಯು ರಾಹುಲನ ಸಮೇತ ಅರಣ್ಯದ ಮಾರ್ಗವನ್ನು ಹಿಡಿಯಿತು. ತದನಂತರ ಮೇಲೆ ವಿವರಿಸಿದ ಮಹಾಕಂಟಕಪ್ರದವಾದ ಸಮಾಚಾರವು ಸಂಭವಿಸಿದುದು.



ಆ ದಿವಸದ ಸ್ವಾರ್ಥತ್ಯಾಗದಿಂದ ಯಶೋಧರೆಯು ಸಿದ್ಧಾರ್ಥನ ಪೂರ್ಣಾನುರಕ್ತಿಗೆ ಪಾತ್ರಳಾದಳು. ಸತ್ಯವಾಗಿಯೂ ಸಿದ್ಧಾರ್ಥನ ಅಂತರ್ಯವನ್ನು ತಿಳಿಯುವ ವಿಧವು ಅತಿ ತೀಕ್ಷ್ಣವಾಗಿದ್ದುದರಿಂದ ಆತನ ಶಿಷ್ಯರಾಗುವುದು ಕೇವಲ ಲೌಕಿಕ ಧರ್ಮದ ಮನುಷ್ಯಮಾತ್ರದವರಿಗೆ ಅಗಮ್ಯವೇ ಸರಿ. ಆ ದಿನವು ಯಶೋಧರೆಗೆ ಮಹಾ ಆನಂದಮಯವಾದದ್ದಾಯಿತು. ಅನುದಿನವೂ ಸಿದ್ಧಾರ್ಥನ ಪಕ್ಕದಲ್ಲಿದ್ದುಕೊಂಡು ಆತನ ಸೇವೆಯನ್ನು ಮಾಡುವಂತೆ ಆಕೆಗೀಗ ಆತನ ಅನುಜ್ಞೆಯು ದೊರಕಿತು. ರಾಹುಲನೂ ತನ್ನ ತಂದೆಯ ಶಿಷ್ಯವರ್ಗಕ್ಕೆ ಶೇರಿಕೊಂಡನು. ಪಟ್ಟಣದ ಮಿಕ್ಕ ಜನರೂ ಆತನ ಸಂದೇಶವನ್ನು ಭಕ್ತಿಪುರಸ್ಸರವಾಗಿ ಕೈಕೊಂಡರು. ಯಶೋಧರೆಯ ಸುಖಸ್ವಪ್ನವು ಧಿಟವಾಗಿ ಫಲಿಸಿತು. ಸಿದ್ಧಾರ್ಥನ ಪ್ರಯತ್ನವು ಸಾರ್ಥಕವಾದುದು. ಸಚ್ಚಿದಾನಂದವೆಂಬ ಶಾಸನವು ಕಪಿಲವಸ್ತು ನಗರದಲ್ಲೆಲ್ಲಾ ಪಸರಿಸಿ ನಿರಂತರವೂ ನೆಲೆ

Digitized by ROJA MUTHIAH RESEARCH LIBRARY

ಗೊಂಡುದುದು. ಎಲೈ! ವಾಚಕರಿರಾ! ಇದಕ್ಕಿಂತಲೂ ಅಭಿನಂದ ನೀಯವಾದ ವಿಷಯವಾವುದು?

ಕಾಲಕ್ರಮೇಣ, ಯಶೋಧರೆಯ ಜೀವಾತ್ಮನು ನಿರ್ವಾಣವೆಂಬ ಮುಕ್ತಿಯನ್ನು ಬಯಸಿ ಹೊರಟುಹೋಗಲು, ಪಂಚಮಹಾಭೂತಗಳಿಂದ ನಿರ್ಮಿತವಾದ ಆಕೆಯ ಕಳೇಬರವು ಪರಮೇಶ್ವರನ ಕಟ್ಟಳೆಗನುಸಾರವಾಗಿ ಅವುಗಳಲ್ಲೇ ಪುನಶ್ಚ ವಿಲೀನವಾದುದು; ಆದರೆ ಎಷ್ಟೋ ಶತಮಾನಗಳಿಂದ ಈ ಪರ್ಯಂತರವೂ ಆಕೆಯ ವಿಮಲವಾದ ದಿಗಂತಕೀರ್ತಿಯು ಚಿರಸ್ಮರಣೀಯವಾಗಿ ಅಸ್ತಿತ್ವವನ್ನು ಹೊಂದಿ ಭವಿಷ್ಯದಲ್ಲಿಯೂ ಸೂರ್ಯ ಚಂದ್ರಾದಿಗಳು ಇರುವ ತನಕ ಆ ಖ್ಯಾತಿಯು ಇನ್ನಷ್ಟು ಬಲಿದು ಪ್ರಜ್ವಲಮಾನಾಯವಾಗಿ ಕದಲದೆ ಶಾಶ್ವತವಾಗಿದ್ದೀತು. ಇಂಥಾ ಸ್ತ್ರೀ ರತ್ನಗಳೇ ನಮ್ಮ ಭಾಗ್ಯಶಾಲಿನಿಯಾದ ಭಾರತಮಾತೆಯ ಅಮೂಲ್ಯವಾದ ಭೂಷಣಗಳು; ಇವರುಗಳ ಚರಿತ್ರವೇ ಧರ್ಮದಲ್ಲಿ ಗೂಢವಾದ ತತ್ವದ ನಿವಾಸಸ್ಥಾನವು. ಇಂಥಾ ಮಹಿಳಾಶಿರೋಮಣಿಗಳ ಪಾತಿವ್ರತ್ಯದ ತೀಕ್ಷ್ಣಪ್ರಭಾವದಿಂದಲೇ ಈ ನಮ್ಮ ಭಾರತಮಾತೆಯು ಎಷ್ಟೋ ಕಷ್ಟಗಳನ್ನಾದರೂ ಸಹಿಸಿಕೊಂಡು ಸಾವಿರಾರು ವರ್ಷಗಳಿಂದ ತನ್ನ ಅಸ್ಥಿತ್ವವನ್ನು ಕಾಪಾಡಿಕೊಳ್ಳಲು ಸಮರ್ಥಳಾದಳು.

ಪ್ರಿಯ ವಾಚಕ ಭಗಿನಿಯರಿರಾ! ಯಶಸ್ವಿನಿಯಾದ ಯಶೋಧರೆಯ ಯಶಃದಿಂದ ಆಕೆಗೆ ಪ್ರಾಪ್ತವಾದ ಪತಿಸೇವೆಯ ಅನಂತಸುಖವು ನಿಮಗೂ ಸದಾ ಲಭಿಸಲೆಂದು ಶ್ರೀ ಸಚ್ಚಿದಾನಂದ ಸ್ವರೂಪಿಯಾದ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಇತಿ ಸಂಪೂರ್ಣಂ

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರೂ ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

ಪುಸ್ತಕಸೂಚಿ

ವ. ಸಂ: O, 33, 3 SRI S
H23
ಕ್ರ. ಸಂ: 812

ಲೇಖಕ ಶ್ರೀನಿವಾಸರಾವ್ (ಎಂ)..

ವ. ಸಂ: O, 33, 3 SRI S
H23
ಕ್ರ. ಸಂ: 812

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY